ಕರ್ನಾಟಕ ಸರ್ಕಾರ

# ವಿಜ್ಞಾನ
# ಅಭ್ಯಾಸ ಪುಸ್ತಕ

## ಕನ್ನಡ ಮಾಧ್ಯಮ

# 6

## ಆರನೆಯ ತರಗತಿ
## ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್

## 2015

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
**100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,**
**ಬೆಂಗಳೂರು – 560 085.**

©KTBS Not to be republished

## ಅಭ್ಯಾಸ ಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು:**

1) ಪ್ರೊ. ರಾಘವೇಂದ್ರ ಪಾಟೀಲ, ಪ್ರಾಚಾರ್ಯರು(ನಿವೃತ್ತ), ಎ.ಎಸ್.ಟಿ. ಪದವಿ ಪೂರ್ವ ಕಾಲೇಜು, ಮಲ್ಲಾಡಿಹಳ್ಳಿ, ಚಿತ್ರದುರ್ಗ.
2) ಡಾ.ಎಸ್. ಭಾಸ್ಕರ, ಪ್ರಾಂಶುಪಾಲರು(ನಿವೃತ್ತ), ಆರ್.ವಿ. ಶಿಕ್ಷಕರ ಮಹಾವಿದ್ಯಾಲಯ (ಐ.ಎ.ಎಸ್.ಇ), ಬೆಂಗಳೂರು.

**ಸದಸ್ಯರು:**

1) ಶ್ರೀ ಪಿ. ಚಲುವನಾರಾಯಣ ಸ್ವಾಮಿ, ಮು.ಶಿ, ಸರ್ಕಾರಿ ಪ್ರೌಢಶಾಲೆ, ಬಾಗೂರು, ಚನ್ನರಾಯಪಟ್ಟಣ ತಾ. ಹಾಸನ.
2) ಶ್ರೀಮತಿ ಎ.ಆರ್. ಶುಭಾ, ಸ.ಶಿ, ಮಹಾತ್ಮ ಗಾಂಧಿ ಸರ್ಕಾರಿ ಪ್ರೌಢಶಾಲೆ(ಬಾಲಕರ), ಚಿಂತಾಮಣಿ, ಚಿಕ್ಕಬಳ್ಳಾಪುರ.
3) ಶ್ರೀ ಬಿ. ರಾಧಾಕೃಷ್ಣ ಬಾಳಿಗಾ, ಸ.ಶಿ, ಶ್ರೀ ಶಾರದಾ ಪ್ರೌಢಶಾಲೆ, ಪಾಣೆಮಂಗಳೂರು, ದಕ್ಷಿಣ ಕನ್ನಡ.
4) ಶ್ರೀ ವಿನಾಯಕ ಆರ್.ಬಂಡಾ, ಸ.ಶಿ, ಸರ್ಕಾರಿ ಪ್ರೌಢಶಾಲೆ, ರಾಜೀವಗಾಂಧಿನಗರ, ಗದಗ.
5) ಶ್ರೀ ವಿ.ಬಿ. ಶಿಂಗೆ, ಚಿತ್ರಕಲಾ ಶಿಕ್ಷಕರು, ಕರ್ನಾಟಕ ಪ್ರೌಢಶಾಲೆ, ಧಾರವಾಡ.

**ಅನುವಾದಕರು :**

1) ಶ್ರೀ ಪಿ. ಚಲುವನಾರಾಯಣ ಸ್ವಾಮಿ, ಮು.ಶಿ, ಸ.ಪ್ರೌ.ಶಾ, ಬಾಗೂರು, ಚನ್ನರಾಯಪಟ್ಟಣ ತಾ. ಹಾಸನ.
2) ಶ್ರೀಮತಿ ಎ.ಆರ್. ಶುಭಾ, ಸ.ಶಿ, ಮಹಾತ್ಮ ಗಾಂಧಿ ಸರ್ಕಾರಿ ಪ್ರೌಢಶಾಲೆ(ಬಾಲಕರ), ಚಿಂತಾಮಣಿ, ಚಿಕ್ಕಬಳ್ಳಾಪುರ.
3) ಶ್ರೀ ಬಿ. ರಾಧಾಕೃಷ್ಣ ಬಾಳಿಗಾ, ಸ.ಶಿ, ಶ್ರೀ ಶಾರದಾ ಪ್ರೌಢಶಾಲೆ, ಪಾಣೆಮಂಗಳೂರು, ದಕ್ಷಿಣ ಕನ್ನಡ.
4) ಶ್ರೀ ವಿನಾಯಕ ಆರ್.ಬಂಡಾ, ಸ.ಶಿ, ಸರ್ಕಾರಿ ಪ್ರೌಢಶಾಲೆ, ರಾಜೀವಗಾಂಧಿನಗರ, ಗದಗ.

**ಮುಖ್ಯ ಸಂಯೋಜಕರು:**

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಮುಖ್ಯ ಸಲಹೆಗಾರರು:**

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀ ಪಾಂಡುರಂಗ, ಉಪನಿರ್ದೇಶಕರು(ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

ಶ್ರೀಮತಿ ಎನ್. ಆರ್. ಶೈಲಜಕುಮಾರಿ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

©KTBS Not to be republished

# ಮುನ್ನುಡಿ

ಕರ್ನಾಟಕ ರಾಜ್ಯವು ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದೆ. 2012–13ನೇ ಸಾಲಿನಲ್ಲಿ ಎನ್.ಸಿ.ಎಫ್ 2005 ಮತ್ತು ಕೆ.ಸಿ.ಎಫ್ 2007 ಆಧಾರಿತ ಪಠ್ಯವಸ್ತುಗಳ ತತ್ವಗಳಾಧರಿತ ಪಠ್ಯಪುಸ್ತಕಗಳನ್ನು 5ನೇ ಮತ್ತು 8ನೇ ತರಗತಿಗಾಗಿ ತಯಾರಿಸಿದೆ. 2013–14 ರಲ್ಲಿ 1, 2, 6 ಮತ್ತು 9 ನೇಯ ತರಗತಿಗಳ ಪಠ್ಯಪುಸ್ತಕಗಳನ್ನು ತಯಾರಿಸಿ ಜಾರಿಗೊಳಿಸಲಾಗಿದೆ. ಈ ಪಠ್ಯಪುಸ್ತಕಗಳ ಪ್ರಮುಖ ಲಕ್ಷಣಗಳು ಯಾವುದೆಂದರೆ – ಕಲಿಯುವುದನ್ನು ಕಲಿಸುವುದು, ಕಲಿಕೆ ಪಠ್ಯಪುಸ್ತಕಗಳಿಗೆ ಸೀಮಿತವಾಗಿರದೆ ಇನ್ನೂ ಮುಂದೆ ವಿಸ್ತರಿಸಲ್ಪಡಬೇಕು ಹಾಗೂ ಅದು ಸಮಗ್ರವಾಗಿರಬೇಕು. ಅಧ್ಯಾಪಕರು ತರಗತಿಯಲ್ಲಿ ಮಕ್ಕಳಿಗೆ ಕಲಿಕೆಗೆ ಅತ್ಯಾವಶ್ಯಕವಾದ ಸನ್ನಿವೇಶಗಳನ್ನು ಒದಗಿಸಿಕೊಡಬೇಕು. ಇದರಿಂದಾಗಿ ಮಕ್ಕಳಲ್ಲಿ ಆತ್ಮಸ್ಥೈರ್ಯ ಉಂಟಾಗಿ ಅವರ ವ್ಯಕ್ತಿತ್ವ ಬೆಳವಣಿಗೆಗಳಿಗೆ ನಿರೀಕ್ಷಿತ ರೀತಿಯಲ್ಲಿ ಅನುವು ಮಾಡಿಕೊಟ್ಟಂತಾಗುತ್ತದೆ.

ಕರ್ನಾಟಕ ಸರಕಾರ ಮೊಟ್ಟ ಮೊದಲಾಗಿ ರಾಜ್ಯದಲ್ಲಿ ಕಳೆದ ವರ್ಷ 5ನೇ ಹಾಗೂ 8ನೇ ತರಗತಿಗಳಲ್ಲಿ ಅಭ್ಯಾಸ ಪುಸ್ತಕಗಳನ್ನು ಜಾರಿಗೆ ತಂದಿದೆ. 2013–14 ನೇ ಸಾಲಿನಲ್ಲಿ 6 ನೇಯ ತರಗತಿಗಳಿಗಾಗಿ ಮಕ್ಕಳ ಅಭ್ಯಾಸ ಪುಸ್ತಕಗಳನ್ನು ತಯಾರಿಸಿ ಜಾರಿಗೊಳಿಸಲಾಗಿದೆ. ಇದರಿಂದಾಗಿ ಮಕ್ಕಳ ಕಲಿಕೆಯಲ್ಲಿ ಪ್ರಗತಿಯಾಗಲಿದೆ. ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆನಂದಾನುಭೂತಿಯಿಂದ ಕಲಿಕೆಯ ಪ್ರಕ್ರಿಯೆ ನಡೆಯುತ್ತದೆ. ಅಧ್ಯಾಪಕರು ಈ ಪುಸ್ತಕಗಳನ್ನು ಇನ್ನೊಂದು ಪಠ್ಯಪುಸ್ತಕವೆಂದು ಪರಿಗಣಿಸಬಾರದು. ಈ ಅಭ್ಯಾಸ ಪುಸ್ತಕಗಳಲ್ಲಿ ಮೂರು ಮಟ್ಟದ ಅಭ್ಯಾಸಗಳಿರುತ್ತವೆ. ನಿಧಾನವಾಗಿ ಕಲಿಯುವ ಮಕ್ಕಳಿಗೆ, ಸಾಮಾನ್ಯಗತಿಯಲ್ಲಿ ಕಲಿಯುವ ಮಕ್ಕಳಿಗೆ ಹಾಗೂ ವೇಗದಿಂದ ಕಲಿಯುವ ಮಕ್ಕಳಿಗಾಗುವ ಅಭ್ಯಾಸಗಳಿರುತ್ತವೆ. ಅಲ್ಲದೆ ಈ ಅಭ್ಯಾಸಗಳಲ್ಲಿ ವೈವಿಧ್ಯತೆಗಳಿವೆ. ಹೆಚ್ಚಿನ ಅಭ್ಯಾಸಗಳು ಗಳಿಸಿದ ಜ್ಞಾನವನ್ನು ಜೀವನದಲ್ಲಿ ಅಳವಡಿಸುವಂತಹುಗಳಾಗಿವೆ.

ಈ ಅಭ್ಯಾಸ ಪುಸ್ತಕಗಳನ್ನು ಉಪಯೋಗಿಸುವಾಗ ಅಧ್ಯಾಪಕ–ಅಧ್ಯಾಪಕಿಯರ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ. ಬಹಳಷ್ಟು ಅಭ್ಯಾಸಗಳು ಮಕ್ಕಳು ಗುಂಪಿನಲ್ಲಿ ಕುಳಿತು ಮಾಡುವಂತಹುಗಳಿವೆ. ಅವುಗಳ ಗುರಿ ಮಕ್ಕಳು ಅತ್ಯಾವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು

©KTBS Not to be republished

ಸಹಾಯಕವಾಗುತ್ತವೆ. ಇವುಗಳಲ್ಲಿ ಹೆಚ್ಚಿನ ಅಭ್ಯಾಸಗಳು ಪಠ್ಯಪುಸ್ತಕ ಆಧಾರಿತವಾಗಿವೆ. ಆದರೆ ಭಾಷೆಗಳಲ್ಲಿ ಭಾಷಾಕಲಿಕೆಯ ಕೌಶಲ್ಯಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ಮಾಹಿತಿ ಸಂಗ್ರಹಿಸುವುದು ಇತ್ಯಾದಿ ಚಟುವಟಿಕೆಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ.

ಅಭ್ಯಾಸ ಪುಸ್ತಕಗಳನ್ನು ಜಾರಿಗೆ ತರುವಲ್ಲಿ ಸಹಕರಿಸಿದ ಸರ್ವಶಿಕ್ಷಣ ಅಭಿಯಾನ, ರಚನಾ ಸಮಿತಿಯವರಿಗೆ ಮತ್ತು ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳಿಗೆ ಕರ್ನಾಟಕ ಪಠ್ಯಪುಸ್ತಕ ಸಂಘವು ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು.

©KTBS
Not to be republished

## ಅಧ್ಯಕ್ಷರ ನುಡಿ...

**ರಾ.ಪ.ಚೌ – 2005** ರ ಆಧಾರಿತ 6ನೇ ತರಗತಿಯ **ವಿಜ್ಞಾನ** ಪಠ್ಯಪುಸ್ತಕಕ್ಕೆ ಪೂರಕವಾಗಿ ಈ ಅಭ್ಯಾಸ ಪುಸ್ತಕವನ್ನು ರಚಿಸಲಾಗಿದೆ. ಮಕ್ಕಳು ತರಗತಿಯಲ್ಲಿ ಪಡೆದ ಜ್ಞಾನ, ತಿಳುವಳಿಕೆ ಮತ್ತು ಕೌಶಲಗಳನ್ನು ಅಭ್ಯಾಸ ಮತ್ತು ಅನುಭವಗಳ ಮೂಲಕ ಪುನರ್ಬಲನ ಮಾಡಿಕೊಂಡು ವೈಜ್ಞಾನಿಕ ಮನೋಭಾವನೆಯನ್ನು ರೂಢಿಸಿಕೊಳ್ಳಲು ನೆರವಾಗುವುದೇ ಈ ಅಭ್ಯಾಸ ಪುಸ್ತಕದ ಪ್ರಮುಖ ಉದ್ದೇಶವಾಗಿದೆ.

ಮೊದಲನೆಯ ಮತ್ತು ಎರಡನೆಯ ಸೆಮಿಸ್ಟರ್‌ನ ಪ್ರತಿ ಘಟಕದಲ್ಲಿ ವೈವಿಧ್ಯಮಯವಾದ ಅಭ್ಯಾಸಗಳನ್ನು ನೀಡಲಾಗಿದೆ. ಈ ಅಭ್ಯಾಸಗಳನ್ನು  ಮಕ್ಕಳು ತಾವೇ ಸ್ವತಃ / ಗುಂಪಿನಲ್ಲಿ / ಶಿಕ್ಷಕರ ಸಹಾಯದಿಂದ ಮಾಡುವುದರ ಮೂಲಕ ಆಸಕ್ತಿ, ಆಲೋಚನೆ ಮತ್ತು ಅನ್ವಯ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾರೆ ಎಂದು ಆಶಿಸಲಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ಪ್ರೋತ್ಸಾಹ ಮತ್ತು ಮಾರ್ಗದರ್ಶನವನ್ನು ನಿರೀಕ್ಷಿಸಲಾಗಿದೆ.

ಅಭ್ಯಾಸ ಪುಸ್ತಕದಲ್ಲಿ ನೀಡಲಾಗಿರುವ ಪ್ರಶ್ನೆಗಳು ಮಕ್ಕಳನ್ನು ಅವಲೋಕನ, ಮಾಹಿತಿ ಸಂಗ್ರಹ, ವಿಶ್ಲೇಷಣೆ, ವರ್ಗೀಕರಣ, ಕಾರಣಗಳನ್ನು ನೀಡುವುದು, ತೀರ್ಮಾನ ಕೈಗೊಳ್ಳುವುದು, ಪ್ರಯೋಗಗಳನ್ನು ಮಾಡುವುದು, ಯೋಜನಾ ಕಾರ್ಯಗಳನ್ನು ನಿರ್ವಹಿಸುವುದು, ಪದಬಂಧಗಳನ್ನು ಬಿಡಿಸುವುದು ಮತ್ತು ಚಿತ್ರಗಳ ರಚನೆಯಂತಹ ಚಟುವಟಿಕೆಗಳಲ್ಲಿ ತೊಡಗಿಸುವುದರ ಮೂಲಕ ಮಕ್ಕಳು ವೈಜ್ಞಾನಿಕ ಪದಗಳು ಮತ್ತು ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥೈಸಿಕೊಂಡು, ಅನ್ವಯಿಸಲು ಪ್ರೇರೇಪಿಸುತ್ತವೆ.

ಮಗುವಿನ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಜ್ಞಾನವಲಯ, ಭಾವನಾತ್ಮಕ ವಲಯ ಮತ್ತು ಮನೋಚಾಲನ ವಲಯ – ಈ ಮೂರು ವಲಯಗಳ ಅಡಿಯಲ್ಲಿ ಅಭ್ಯಾಸಗಳನ್ನು ರೂಪಿಸಲು ಪ್ರಯತ್ನಿಸಲಾಗಿದೆ. ಈ ಅಭ್ಯಾಸ ಪುಸ್ತಕವು ಮಕ್ಕಳಿಗೆ ಒಂದು ಹೊರೆಯಾಗದೇ, ಕಲಿಕೆಗೆ ಸ್ಫೂರ್ತಿ ನೀಡುವಂತೆ ಮಾಡಲು ಶ್ರಮಿಸಿದ / ಪ್ರೋತ್ಸಾಹಿಸಿದ / ಸಲಹೆಗಳನ್ನು ನೀಡಿದ ಎಲ್ಲರಿಗೂ ಕೃತಜ್ಞತೆಗಳು. ಈ ಅಭ್ಯಾಸ ಪುಸ್ತಕ ಇನ್ನೂ ಉತ್ತಮವಾಗಿ ಮೂಡಿ ಬರಲು ನೆರವಾಗುವ ಸಲಹೆಗಳಿಗೆ ಸದಾ ಸ್ವಾಗತ.

**ಪ್ರೊ. ರಾಘವೇಂದ್ರ ಪಾಟೀಲ**

**ಡಾ.ಎಸ್. ಭಾಸ್ಕರ**

**ಅಧ್ಯಕ್ಷರು**

©KTBS
Not to be republished

# ಪರಿವಿಡಿ

## ಮೊದಲನೆಯ ಸೆಮಿಸ್ಟರ್


| ಕ್ರ.ಸಂ. | ಘಟಕ | ಪುಟ ಸಂಖ್ಯೆ |
|---|---|---|
| 1. | ಆವಾಸ | 1 - 10 |
| 2. | ಜೀವಿಗಳಲ್ಲಿ ಅಂಗ ಸಂಯೋಜನೆ | 11 - 18 |
| 3. | ಧಾತುಗಳು ಮತ್ತು ಸಂಯುಕ್ತಗಳು | 19 - 27 |
| 4. | ಲೋಹಗಳು ಮತ್ತು ಅಲೋಹಗಳು | 28 - 33 |
| 5. | ಮಿಶ್ರಣದಲ್ಲಿರುವ ವಸ್ತುಗಳನ್ನು ಬೇರ್ಪಡಿಸುವಿಕೆ | 34 - 38 |
| 6. | ವಿದ್ಯುತ್‌ವಾಹಕಗಳು ಮತ್ತು ನಿರೋಧಕಗಳು | 39 - 43 |
| 7. | ಅಳತೆಯ ಸಾಧನಗಳು | 44 - 49 |


## ಎರಡನೆಯ ಸೆಮಿಸ್ಟರ್


| ಕ್ರ.ಸಂ. | ಘಟಕ | ಪುಟ ಸಂಖ್ಯೆ |
|---|---|---|
| 1. | ಆಹಾರ | 50 - 55 |
| 2. | ನೀರು | 56 - 63 |
| 3. | ಮಣ್ಣು | 64 - 67 |
| 4. | ದಹ್ಯವಸ್ತುಗಳು ಮತ್ತು ಅಗ್ನಿಶಾಮಕಗಳು | 68 - 74 |
| 5. | ಜವ ಮತ್ತು ವೇಗ | 75 - 79 |
| 6. | ಭೂಮಿ – ಒಂದು ಜೀವಂತ ಗ್ರಹ | 80 - 83 |
| 7. | ವಾಯುಗೋಳ | 84 - 90 |
| 8. | ನೈಸರ್ಗಿಕ ವಿಕೋಪಗಳು | 91 - 93 |
| 9. | ಚಂದ್ರನ ಬಿಂಬಾವಸ್ಥೆಗಳು | 94 - 97 |
| 10. | ಗ್ರಹಣಗಳು | 98 - 102 |


©KTBS Not to be republished

## ಮೊದಲನೆಯ ಸೆಮಿಸ್ಟರ್

## ಘಟಕ – 1

## ಆವಾಸ

**I. ಪ್ರತಿಯೊಂದು ಪೂರ್ಣ/ ಅಪೂರ್ಣ ಹೇಳಿಕೆಯ ಕೆಳಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಅದರ ಮುಂದೆ (✓) ಗುರುತನ್ನು ಹಾಕಿ :**

1. ತಮಗಾಗಿ ಮನೆ ಕಟ್ಟಿಕೊಳ್ಳುವ ಒಂದು ಕೀಟ

   ಅ) ಜೇನುನೊಣ   ಆ) ನೊಣ

   ಇ) ಚಿಟ್ಟೆ   ಈ) ತಿಗಣೆ

2. ಗೂಡು ಕಟ್ಟುವ ಹಕ್ಕಿ

   ಅ) ಕೋಗಿಲೆ   ಆ) ನವಿಲು

   ಇ) ಕೋಳಿ   ಈ) ಗೀಜಗ

3. ಮರುಭೂಮಿಯ ಹಡಗು ಎಂದು ಕರೆಯಲ್ಪಡುವ ಪ್ರಾಣಿ

   ಅ) ಕುದುರೆ   ಆ) ಒಂಟೆ

   ಇ) ಆನೆ   ಈ) ಯಾಕ್

4. ಜಲ ಆವಾಸದ ಬಹು ಮುಖ್ಯ ಅಜೈವಿಕ ಅಂಶ

   ಅ) ಬೆಳಕು   ಆ) ಉಷ್ಣತೆ

   ಇ) ಲವಣಾಂಶ   ಈ) ಆಕ್ಸಿಜನ್

5. ಸಿಹಿ ನೀರಿನ ಆವಾಸದ ಲವಣಾಂಶದ ಪ್ರಮಾಣ

   ಅ) ಶೇ. 1 ಕ್ಕಿಂತ ಕಡಿಮೆ   ಆ) ಶೇ. 3.5 ಕ್ಕಿಂತ ಕಡಿಮೆ

   ಇ) ಶೇ. 1 ಕ್ಕಿಂತ ಹೆಚ್ಚು   ಈ) ಶೇ. 3.5 ಕ್ಕಿಂತ ಹೆಚ್ಚು

©KTBS Not to be republished

**II.** **ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ :**

1. ಪ್ರಾಣಿಗಳ ಎರಡು ಮೂಲಭೂತ ಆವಾಸಗಳು ______________ ಮತ್ತು ______________ .

2. ಪೆಂಗ್ವಿನನ್ನು ______________ ಎನ್ನುವರು.

3. ಪ್ರಾಣಿಗಳು ಗಾಳಿಯಲ್ಲಿನ ______________ ಅನ್ನು ಉಸಿರಾಟಕ್ಕೆ ಬಳಸಿಕೊಂಡು ______________ ಅನ್ನು ಹೊರಹಾಕುತ್ತವೆ.

4. ನೀರಿನಲ್ಲಿ ಕರಗಿರುವ ಉಪ್ಪು ಮುಂತಾದ ರಾಸಾಯನಿಕಗಳನ್ನು ______________ ಎನ್ನುವರು.

5. ಆವಾಸ = ಭೌಗೋಳಿಕ ಪ್ರದೇಶ + ______________ .

**III.** **ಈ ಕೆಳಗಿನವುಗಳಿಗೆ ಕಾರಣಗಳನ್ನು ಕೊಡಿ :**

1. ಮರುಭೂಮಿಯಲ್ಲಿ ಭತ್ತ ಬೆಳೆಯುವುದಿಲ್ಲ.

______________________________________________

______________________________________________

2. ಆಳವಾದ ಸಮುದ್ರದಲ್ಲಿ ಹಸಿರು ಸಸ್ಯಗಳು ಅತಿ ಕಡಿಮೆ.

______________________________________________

______________________________________________

3. ಹಿಮಕರಡಿಗಳು ದಪ್ಪವಾದ ತುಪ್ಪಳವನ್ನು ಹೊಂದಿರುತ್ತವೆ.

______________________________________________

______________________________________________

©KTBS Not to be republished

4. ಸಮುದ್ರದಲ್ಲಿ ವಾಸಿಸುವ ಶಾರ್ಕ್‌ಮೀನು ಕಾವೇರಿ ನದಿಯ ನೀರಿನಲ್ಲಿ ಬದುಕಲಾರದು.

5. ಅರಣ್ಯ ಆವಾಸವು ಅತ್ಯಂತ ದಟ್ಟವಾದ ಸಸ್ಯರಾಶಿಯನ್ನು ಹೊಂದಿರುತ್ತದೆ.

**IV. ಈ ಕೆಳಗಿನ ಸಂದರ್ಭಗಳಲ್ಲಿ ಏನಾಗುತ್ತದೆ ?**

1. ನೀರಿನಿಂದ ಮೀನನ್ನು ಹೊರಕ್ಕೆ ಹಾಕಿದರೆ

2. ನೀರಿನಲ್ಲಿರುವ ಆಮೆಯನ್ನು ಹೊರಕ್ಕೆ ತಂದರೆ

3. ಎರೆಹುಳುವನ್ನು ಸಿಹಿ ನೀರಿಗೆ ಬಿಟ್ಟರೆ

4. ಎರೆಹುಳುವನ್ನು ಒತ್ತುಕಾಗದ (ಬ್ಲಾಟಿಂಗ್ ಪೇಪರ್)ದ ಮೇಲೆ ಹಾಕಿದರೆ

5. ಆರ್ಕಿಡ್ ಸಸ್ಯವನ್ನು ಮರುಭೂಮಿ ಪ್ರದೇಶದಲ್ಲಿ ನಾಟಿ ಮಾಡಿದರೆ

6. ಕುಂಡದಲ್ಲಿನ ಹಸಿರು ಸಸ್ಯವನ್ನು ಕತ್ತಲು ಕವಿದ ಕೊಠಡಿಯಲ್ಲಿ ಇಟ್ಟರೆ

7. ಸಿಹಿ ನೀರಿನಲ್ಲಿ ಬದುಕುವ ಮೀನನ್ನು ಸಮುದ್ರದ ನೀರಿಗೆ ಬಿಟ್ಟರೆ

©KTBS Not to be republished

**V.** ಕೆಳಗೆ ಕೊಟ್ಟಿರುವ ಪ್ರಾಣಿಗಳ ಚಿತ್ರಗಳನ್ನು ಗಮನಿಸಿ, ಅವುಗಳ ಹೆಸರು ಮತ್ತು ಆವಾಸಗಳನ್ನು ಕೊಟ್ಟಿರುವ ಜಾಗದಲ್ಲಿ ಬರೆಯಿರಿ :

| ಕ್ರ.ಸಂ. | ಪ್ರಾಣಿಗಳ ಚಿತ್ರ | ಪ್ರಾಣಿಗಳ ಹೆಸರು | ಆವಾಸಗಳು |
|---|---|---|---|
| 1. |  | | |
| 2. |  | | |
| 3. |  | | |
| 4. |  | | |
| 5. |  | | |
| 6. |  | | |
| 7. |  | | |
| 8. |  | | |

©KTBS Not to be republished

**VI.** **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

1. ಸಿಹಿ ನೀರಿನಲ್ಲಿ ವಾಸಿಸುವ ಮೀನುಗಳು ಎದುರಿಸುವ ಸಮಸ್ಯೆಗಳನ್ನು ಪಟ್ಟಿಮಾಡಿ.

2. ಸಮುದ್ರದ ನೀರಿನಲ್ಲಿ ವಾಸಿಸುವ ಮೀನುಗಳು ಎದುರಿಸುವ ಸಮಸ್ಯೆಗಳನ್ನು ಪಟ್ಟಿಮಾಡಿ.

3. ಸಿಹಿ ನೀರಿನ ಆವಾಸ ಮತ್ತು ಸಮುದ್ರ ನೀರಿನ ಆವಾಸಗಳ ನಡುವಣ ಮುಖ್ಯ ವ್ಯತ್ಯಾಸಗಳನ್ನು ತಿಳಿಸಿ.

4. ಜಲ ಆವಾಸದಲ್ಲಿ ವಾಸಿಸುವ ಪ್ರಾಣಿಗಳಿಗೆ ಉಸಿರಾಡಲು ಆಕ್ಸಿಜನ್ ಯಾವ ರೂಪದಲ್ಲಿ ದೊರೆಯುತ್ತದೆ ?

5. ಭೂ ಆವಾಸದಲ್ಲಿ ವಾಸಿಸುವ ಪ್ರಾಣಿಗಳಿಗೆ ಉಸಿರಾಡಲು ಆಕ್ಸಿಜನ್ ಯಾವ ರೂಪದಲ್ಲಿ ದೊರೆಯುತ್ತದೆ ?

©KTBS Not to be republished

6. ಮರುಭೂಮಿಯ ಅಜೈವಿಕ ಅಂಶಗಳನ್ನು ಪಟ್ಟಿಮಾಡಿ.

______________________________

______________________________

______________________________

7. ಅರಣ್ಯಗಳಲ್ಲಿ ಕಾಣುವಂತಹ ಎತ್ತರವಾದ ಮರಗಳು ಮರುಭೂಮಿಯಲ್ಲಿ ಕಂಡುಬರುವುದಿಲ್ಲ. ಏಕೆ ?

______________________________

______________________________

______________________________

8. ಜಲ ಆವಾಸದಲ್ಲಿ ಬದುಕುವ ಯಾವುದಾದರೂ 5 ಕಶೇರುಕಗಳು ಮತ್ತು 5 ಅಕಶೇರುಕಗಳನ್ನು ಹೆಸರಿಸಿ.

| | ಕಶೇರುಕ ಗಳು | ಅಕಶೇರುಕಗಳು |
|---|---|---|
| 1. | | |
| 2. | | |
| 3. | | |
| 4. | | |
| 5. | | |

©KTBS Not to be republished

**VII.** ನಾನು ಯಾರು ?

1. ನನ್ನಲ್ಲಿ ಸಸ್ಯ ಮತ್ತು ಪ್ರಾಣಿಗಳು ಬದುಕಲು ಅವಕಾಶ ಕಲ್ಪಿಸುತ್ತೇನೆ. ಅವುಗಳಿಗೆ ತಿನ್ನಲು ಆಹಾರ ಮತ್ತು ಉಸಿರಾಡಲು ಗಾಳಿಯನ್ನು ಒದಗಿಸುತ್ತೇನೆ.

______________________________

2. ನನ್ನಲ್ಲಿ ತುಂಬಾ ಕಡಿಮೆ ಮಳೆ. ನನ್ನಲ್ಲಿ ಕಳ್ಳಿಗಳಂತಹ ಶುಷ್ಕ ಸಸ್ಯಗಳು ಬೆಳೆಯುತ್ತವೆ. ಓತಿಕ್ಯಾತ, ಹಾವು ಮತ್ತು ಓಡುವ ಹಕ್ಕಿ ಮುಂತಾದ ಪ್ರಾಣಿಗಳು ನನ್ನಲ್ಲಿ ವಾಸಿಸುತ್ತವೆ.

______________________________

3. ನಾನು ವಿಸ್ತಾರವಾದ ನೀರಿನ ಆಕರ. ನನ್ನಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಲವಣಾಂಶಗಳು ಕರಗಿರುತ್ತವೆ. ನನ್ನಲ್ಲಿ ವಾಸಿಸುವ ಪ್ರಾಣಿಗಳು ಹೆಚ್ಚು ಲವಣಗಳಿರುವ ಪ್ರಬಲ ದ್ರಾವಣದಂತಹ ಮೂತ್ರವನ್ನು ವಿಸರ್ಜಿಸುತ್ತವೆ.

______________________________

4. ನಾನು ಚಿಕ್ಕ ನೀರಿನ ಆಕರ. ನನ್ನಲ್ಲಿ ವಾಸಿಸುವ ಪ್ರಾಣಿಗಳು ಹೆಚ್ಚು ನೀರಿರುವ ದುರ್ಬಲಗೊಂಡ ಮೂತ್ರವನ್ನು ವಿಸರ್ಜಿಸುತ್ತವೆ.

______________________________

5. ನನ್ನಲ್ಲಿ ಸಾಧಾರಣ ಪ್ರಮಾಣದ ಮಳೆ ಬರುತ್ತದೆ. ಹುಲ್ಲು, ಮೂಲಿಕೆಗಳು, ಪೊದರುಗಳು ಮತ್ತು ಚಿಕ್ಕ ಮರಗಳು ನನ್ನಲ್ಲಿ ಬೆಳೆಯುತ್ತವೆ. ಜಿಂಕೆ ಮತ್ತು ಕಾಡೆಮ್ಮೆಗಳು ನನ್ನಲ್ಲಿ ವಾಸಿಸುವ ನನ್ನ ಪ್ರೀತಿಯ ಪ್ರಾಣಿಗಳು.

______________________________

6. ನನ್ನಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ. ದಟ್ಟವಾದ ಸಸ್ಯರಾಶಿ ಬೆಳೆಯುತ್ತದೆ. ಅತ್ಯಂತ ಶ್ರೀಮಂತವಾದ ಸಸ್ಯ ಮತ್ತು ಪ್ರಾಣಿ ಸಂಕುಲ ನನ್ನಲ್ಲಿವೆ.

______________________________

©KTBS Not to be republished

**VIII. ಆಟ ಆಡಿ :**

**ಏಕೆ ಹೇಳು ನೋಡುವಾ**

ತರಗತಿಯ ವಿದ್ಯಾರ್ಥಿಗಳನ್ನು ಎರಡು ತಂಡಗಳಾಗಿ ಗುಂಪು ಮಾಡಿ. ಒಂದು ತಂಡವು **ಏಕೆ** ಎಂಬ ಪ್ರಶ್ನೆ ಕೇಳಬೇಕು. ಮತ್ತೊಂದು ತಂಡ ಉತ್ತರಿಸಬೇಕು. ನಂತರ ಉತ್ತರಿಸಿದ ತಂಡವು **ಏಕೆ** ಎಂಬ ಪ್ರಶ್ನೆ ಕೇಳುತ್ತದೆ.

**ಉದಾಹರಣೆ :** ಮರುಭೂಮಿ ಆವಾಸವು ಅತಿ ವಿರಳವಾದ ಸಸ್ಯರಾಶಿಯನ್ನು ಹೊಂದಿರುತ್ತದೆ. ಏಕೆ?

ತಂಡಗಳು ತಾವು ಕೇಳುವ ಪ್ರಶ್ನೆಗಳನ್ನು ತಾವೇ ರಚಿಸಿಕೊಳ್ಳಬೇಕು. ಉತ್ತರ ದೊರೆಯದಂತಹ, ಸೂಕ್ತವಲ್ಲದ ಪ್ರಶ್ನೆಗಳನ್ನು ಕೇಳುವ ತಂಡಗಳಿಗೆ ಋಣಾಂಕಗಳು (negative marks) ದೊರೆಯುತ್ತವೆ.

ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ ತಂಡವನ್ನು ವಿಜಯೀ ತಂಡ ಎಂದು ಘೋಷಿಸಬೇಕು.

ಶಿಕ್ಷಕರು ಈ ಆಟದ ನಿರ್ಣಾಯಕರಾಗಿರುತ್ತಾರೆ.

**IX. ಈ ಕೆಳಗಿನ ಚಿತ್ರವನ್ನು ಗಮನಿಸಿ, ಬಾತುಕೋಳಿ ಮತ್ತು ಮರಿ ಬಾತುಕೋಳಿಯ ಸಂಭಾಷಣೆಯನ್ನು ಓದಿ. ಸನ್ನಿವೇಶವನ್ನು ಅರ್ಥಮಾಡಿಕೊಂಡು ಸಂಭಾಷಣೆಯನ್ನು ಪೂರ್ಣಗೊಳಿಸಿ :**




©KTBS Not to be republished







©KTBS
Not to be republished

**X.** ಈ ಚಿತ್ರದಲ್ಲಿರುವ ಪ್ರಾಣಿಗಳು ತಮ್ಮ ಆವಾಸಗಳನ್ನು ಕಳೆದುಕೊಂಡಿವೆ. ಅವು ತಮ್ಮ ಆವಾಸಗಳನ್ನು ಕಂಡುಕೊಳ್ಳಲು ಸಹಾಯ ಮಾಡಿ. ಅವುಗಳ ಹೆಸರನ್ನು ಚಿತ್ರದ ಕೆಳಗೆ ಕೊಟ್ಟಿರುವ ಆವಾಸಗಳ ಕೆಳಗೆ ಬರೆಯಿರಿ :



1. ಅರಣ್ಯ ಆವಾಸ :

___

2. ಹುಲ್ಲುಗಾವಲು ಆವಾಸ :

___

3. ಮರುಭೂಮಿ ಆವಾಸ :

___

4. ಜಲ ಆವಾಸ :

___

©KTBS Not to be republished

## ಘಟಕ – 2

## ಜೀವಿಗಳಲ್ಲಿ ಅಂಗ ಸಂಯೋಜನೆ

**I. ಪ್ರತಿಯೊಂದು ಪೂರ್ಣ/ ಅಪೂರ್ಣ ಹೇಳಿಕೆಯ ಕೆಳಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಅದರ ಮುಂದೆ (✓) ಗುರುತನ್ನು ಹಾಕಿ :**

1. ಮೀನಿನ ದೇಹದ ನಾವೆಯ ಆಕಾರವು ಇದಕ್ಕೆ ಸಹಾಯಕವಾಗಿದೆ

ಅ) ಈಜಲು ಆ) ಪ್ರತಿರೋಧವನ್ನು ಕಡಿಮೆ ಮಾಡಲು

ಇ) ಮುಳುಗಲು ಈ) ಹಿಂದಕ್ಕೆ ನೂಕಲು

2. ಕಿವಿರುಗಳ ಮೂಲಕ ಉಸಿರಾಡುವ ಜಲಚರ ಇದಾಗಿದೆ

ಅ) ಮೊಸಳೆ ಆ) ಮೀನು

ಇ) ತಿಮಿಂಗಿಲ ಈ) ಡಾಲ್ಫಿನ್

3. ಈ ಜಲಚರವು ಒಂದು ಜಾಣ ಸಸ್ತನಿಯಾಗಿದೆ

ಅ) ಡಾಲ್ಫಿನ್ ಆ) ಮೊಸಳೆ

ಇ) ಮೀನು ಈ) ತಿಮಿಂಗಿಲ

4. ಇದು ತಂತು ಬೇರುಗಳನ್ನು ಹೊಂದಿರುವ ಸಸ್ಯವಾಗಿದೆ

ಅ) ಹತ್ತಿ ಆ) ಬಟಾಣಿ

ಇ) ಹುಲ್ಲು ಈ) ಶೇಂಗಾ

5. ಕೀಟಗಳನ್ನು ಆಕರ್ಷಿಸುವ ಹೂವಿನ ಭಾಗ

ಅ) ಪುಷ್ಪ ದಳಗಳು ಆ) ಪುಷ್ಪ ಪತ್ರಗಳು

ಇ) ಶಲಾಕೆ ಈ) ಕೇಸರ

©KTBS Not to be republished

**II.** ಕೆಳಗೆ ಕೊಟ್ಟಿರುವ ಪ್ರಾಣಿ / ಪಕ್ಷಿಗಳ ಚಿತ್ರಗಳನ್ನು ಗಮನಿಸಿ, ಅವುಗಳ ಹೆಸರು ಮತ್ತು ಹೊಂದಾಣಿಕೆಗಳನ್ನು ಅವುಗಳ ಮುಂದೆ ಇರುವ ಖಾಲಿ ಜಾಗದಲ್ಲಿ ಬರೆಯಿರಿ :

| ಕ್ರ.ಸಂ. | ಪ್ರಾಣಿ / ಪಕ್ಷಿಗಳ ಚಿತ್ರ | ಹೆಸರು | ಹೊಂದಾಣಿಕೆಗಳು |
|---|---|---|---|
| 1. |  | | |
| 2. |  | | |
| 3. |  | | |
| 4. |  | | |
| 5. |  | | |

©KTBS Not to be republished

**III.** **ಮೊದಲ ಜೋಡಿ ಪದಗಳ ಸಂಬಂಧವನ್ನು ಗ್ರಹಿಸಿ, ಎರಡನೇ ಜೋಡಿ ಪದಗಳನ್ನು ಪೂರ್ಣಗೊಳಿಸಿ :**

1. ತಿಮಿಂಗಿಲ : ಶ್ವಾಸಕೋಶ :: ಮೀನು : ____________
2. ಆಲದ ಮರ : ಆಧಾರ ಬೇರುಗಳು :: ಅವಿಸೀನಿಯಾ : ____________
3. ಬೀಟ್‌ರೂಟ್ : ಬೇರು :: ಆಲೂಗಡ್ಡೆ : ____________
4. ಪಕ್ಷಿ : ರೆಕ್ಕೆಗಳು :: ಬಾವುಲಿ : ____________
5. ಕಶೇರುಕ : ಮನುಷ್ಯ :: ಅಕಶೇರುಕ : ____________

**IV.** **ಆವರಣದಲ್ಲಿ ನೀಡಿರುವ ಪದಗಳಲ್ಲಿ ಸೂಕ್ತವಾದ ಪದವನ್ನು ಆರಿಸಿ ಬಿಟ್ಟ ಸ್ಥಳಗಳನ್ನು ತುಂಬಿ:**

1. ಕ್ಯಾರೆಟ್‌ನಂತಹ ಸಸ್ಯಗಳಲ್ಲಿ ಆಹಾರದ ಸಂಗ್ರಹಣೆಯ ಭಾಗ ____________ .
   (ಎಲೆಗಳು, ಬೇರುಗಳು)
2. ನೆತ್ತಿಯ ಭಾಗದಲ್ಲಿ ಮೂಗಿನ ರಂಧ್ರಗಳು ಇರುವ ಪ್ರಾಣಿ ____________ .
   (ತಿಮಿಂಗಿಲ, ಮೀನು)
3. ಪಕ್ಷಿಗಳಲ್ಲಿ ____________ ಹಾರಾಟದ ರೆಕ್ಕೆಗಳಾಗಿ ಬದಲಾವಣೆ ಹೊಂದಿವೆ.
   (ಮುಂಗಾಲುಗಳು, ಹಿಂಗಾಲುಗಳು)
4. ತಿಮಿಂಗಿಲದ ____________ ಹುಟ್ಟುಗಳಂತೆ ಬದಲಾವಣೆಗೊಂಡಿವೆ.
   (ಹಿಂಗಾಲುಗಳು, ಮುಂಗಾಲುಗಳು)
5. ಹೂವಿನಲ್ಲಿರುವ ಶಲಾಕೆಗಳು ಸಂತಾನೋತ್ಪತ್ತಿಯ ____________ ಭಾಗಗಳಾಗಿವೆ.
   (ಹೆಣ್ಣು, ಗಂಡು)

©KTBS Not to be republished

**V.** ಜೀವಿಗಳ ಹೊಂದಾಣಿಕೆಗಳನ್ನು ಈ ಕೆಳಗೆ ಕೊಡಲಾಗಿದೆ. ಅವುಗಳ ಒಂದೊಂದು ಉಪಯೋಗವನ್ನು ಬರೆಯಿರಿ :

| ಕ್ರ.ಸಂ. | ಜೀವಿಗಳ ಹೊಂದಾಣಿಕೆ | ಉಪಯೋಗ |
|---|---|---|
| 1. | ಡಾಲ್ಫಿನ್‌ನ ನಾವೆಯಾಕಾರದ ದೇಹ | |
| 2. | ತಿಮಿಂಗಿಲದ ಬ್ಲಬರ್ | |
| 3. | ಪಕ್ಷಿಗಳ ಗರಿಗಳು | |
| 4. | ಹಿಮಕರಡಿಯ ದಪ್ಪದಾದ ತುಪ್ಪಳ | |
| 5. | ಮೀನಿನ ಬಾಲದ ತುದಿಯ ಈಜುರೆಕ್ಕೆ | |
| 6. | ಒಂಟೆಯ ಗೊರಸುಗಳು | |
| 7. | ಬಾವುಲಿಯ ಪಟಾಜಿಯಮ್ | |
| 8. | ಊಸರವಳ್ಳಿಯ ಬಾಲ | |
| 9. | ಆರ್ಕಿಡ್ಸ್‌ನ ಹೀರು ಬೇರುಗಳು | |
| 10. | ಬ್ರಯೋಫಿಲಮ್ ಸಸ್ಯದ ಎಲೆಗಳು | |

©KTBS Not to be republished

**VI.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

1. ಹೊಂದಾಣಿಕೆಗಳು ಎಂದರೇನು?

2. ಮೀನುಗಳಲ್ಲಿರುವ ಒಂಟಿ ಈಜುರೆಕ್ಕೆಗಳನ್ನು ಹೆಸರಿಸಿ.

3. ದ್ಯುತಿಸಂಶ್ಲೇಷಣೆಯು ಸಸ್ಯದ ಯಾವ ಭಾಗದಲ್ಲಿ ನಡೆಯುತ್ತದೆ?

4. ನೀರಿನಲ್ಲಿ ವಾಸಿಸುವ ತಿಮಿಂಗಿಲಗಳ ಉಸಿರಾಟದ ಅಂಗಗಳನ್ನು ಹೆಸರಿಸಿ.

5. ಪಕ್ಷಿಗಳು ತಮ್ಮ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳಲು ಯಾವ ಯಾವ ಹೊಂದಾಣಿಕೆಗಳನ್ನು ಮಾಡಿಕೊಂಡಿವೆ ?

©KTBS Not to be republished

6. ವೇಗವಾಗಿ ಓಡುವ ಪ್ರಾಣಿಗಳ ಪಾದದಲ್ಲಿ ಯಾವ ರೀತಿಯ ಬದಲಾವಣೆಗಳು ಉಂಟಾಗಿರುತ್ತವೆ ?

7. ಕಶೇರುಕಗಳ ಬಾಲದ ಪ್ರಯೋಜನಗಳನ್ನು ತಿಳಿಸಿ ?

8. ಕಾಯಜ ಸಂತಾನೋತ್ಪತ್ತಿ ಎಂದರೇನು ?

**VII. ಈ ಕೆಳಗಿನಂತಿದ್ದರೆ ನನಗಾಗುತ್ತಿದ್ದ ಅನಾನುಕೂಲಗಳೇನು ?**

1. ನಾನು ಸಿಹಿ ನೀರಿನಲ್ಲಿ ವಾಸಿಸುವ ಮೀನು. ನನ್ನ ಚರ್ಮದ ಮೇಲೆ ಹುರುಪೆಗಳಿಲ್ಲದಿದ್ದರೆ

©KTBS Not to be republished

2. ನಾನು ತಿಮಿಂಗಿಲ. ನನ್ನ ಕೈಕಾಲುಗಳು ನನ್ನ ಸಂಬಂಧಿ ಸಸ್ತನಿಗಳಂತೆ ಪೂರ್ಣ ಪ್ರಮಾಣದಲ್ಲಿ ಬೆಳೆದಿದ್ದರೆ

______________________________

______________________________

3. ನಾನು ಪಾರಿವಾಳ. ನನಗೆ ಉದ್ದವಾದ ಬಾಲವಿದ್ದು, ದಪ್ಪನೆಯ ಗಟ್ಟಿಯಾದ ಎಲುಬುಗಳು, ದವಡೆಗಳು ಮತ್ತು ಹಲ್ಲುಗಳಿದ್ದರೆ

______________________________

______________________________

4. ನಾನು ಒತಿಕ್ಯಾತ. ಮರುಭೂಮಿ ನನ್ನ ವಾಸಸ್ಥಾನ. ನನ್ನ ಮೈಮೇಲೆ ಹುರುಪೆಗಳಿಲ್ಲದಿದ್ದರೆ

______________________________

______________________________

©KTBS Not to be republished

## VIII. ಯೋಜನಾ ಕಾರ್ಯ :

ಐದು ಪುಷ್ಪದಳಗಳಿರುವ ದಾಸವಾಳದ ಒಂದು ತಾಜಾ ಹೂವನ್ನು ತೆಗೆದುಕೊಳ್ಳಿ. ಆ ಹೂವಿನ ಪುಷ್ಪ ಪತ್ರಗಳು, ಪುಷ್ಪ ದಳಗಳು, ಕೇಸರಗಳು ಸೇರಿಕೊಂಡು ಆಗಿರುವ ಕೊಳವೆ ಮತ್ತು ಶಲಾಕೆ ಇವುಗಳನ್ನು ಪ್ರತ್ಯೇಕವಾಗಿ ಹೂವಿನಿಂದ ಬಿಡಿಸಿ, ಒಂದು ಡ್ರಾಯಿಂಗ್ ಕಾಗದದ ಮೇಲೆ ಅಂದವಾಗಿ ಅಂಟಿಸಿ, ಆ ಭಾಗಗಳನ್ನು ಹೆಸರಿಸಿ. ಶಿಕ್ಷಕರ ಸಹಾಯದಿಂದ ಕೇಸರ ಮತ್ತು ಶಲಾಕೆಗಳ ಭಾಗಗಳನ್ನು ಗುರ್ತಿಸಿ.

**IX.** ಕೆಳಗಿನ ಕೋಷ್ಟಕದಲ್ಲಿ ಸಸ್ಯದ ವಿವಿಧ ಭಾಗಗಳು ಇವೆ. ಅವುಗಳನ್ನು ಗುರ್ತಿಸಿ, ಸುತ್ತ ಗೆರೆ ಎಳೆಯಿರಿ ಮತ್ತು ಅವುಗಳ ಕಾರ್ಯಗಳನ್ನು ಕೋಷ್ಟಕದ ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆಯಿರಿ :

**ಉದಾಹರಣೆ : ಹೂ**

| | | | | | |
|---|---|---|---|---|---|
| ಎ | ಲೆ | ವ | ಬೇ | ವು | ಶ |
| ಕ | ರ | ಟ | ಒ | ಫ | ಅ |
| ಳ | ಫ | (ಹೂ) | ಬು | ಲ | ಬೇ |
| ಮೊ | ಭಾ | ಸ | ಮೀ | ದೆ | ರು |
| ಗ್ಗು | ತಾ | ಗ | ಡ | ವು | ಬೆ |
| ಬೇ | ಕಾಂ | ಡ | ಮೊ | ಡ | ಎ |

**ಸಸ್ಯದ ವಿವಿಧ ಭಾಗಗಳ ಕಾರ್ಯಗಳು**

**1. ಹೂ :**

ಐಐಐಐ

©KTBS Not to be republished

## ಘಟಕ – 3

## ಧಾತುಗಳು ಮತ್ತು ಸಂಯುಕ್ತಗಳು

**I. ಈ ಕೆಳಗಿನವುಗಳನ್ನು ಹೆಸರಿಸಿ :**

1. ವಸ್ತುವಿನ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಸೂಕ್ಷ್ಮಕಣ.

_______________

2. ಪರಮಾಣುವಿನ ಕೇಂದ್ರ ಭಾಗ.

_______________

3. ಒಂದೇ ವಿಧದ ಪರಮಾಣುಗಳಿಂದ ಮಾಡಲ್ಪಟ್ಟಿರುವ ವಸ್ತು.

_______________

4. ವಿವಿಧ ಪರಮಾಣುಗಳಿಂದ ಮಾಡಲ್ಪಟ್ಟಿರುವ ವಸ್ತು.

_______________

5. ಧಾತುವಿನ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಸೂಕ್ಷ್ಮಕಣ.

_______________

**II. ಧಾತು ಮತ್ತು ಸಂಯುಕ್ತಗಳ ವಿವಿಧ ರೂಪಗಳಿಗೆ ಒಂದೊಂದು ಉದಾಹರಣೆಯನ್ನು ಕೊಡಿ :**

| | ಘನ | ದ್ರವ | ಅನಿಲ |
|---|---|---|---|
| ಧಾತು | | | |
| ಸಂಯುಕ್ತ | | | |

©KTBS Not to be republished

**III.** ಕೆಳಗೆ ಕೊಟ್ಟಿರುವ ಧಾತುಗಳ ಸಂಕೇತಗಳನ್ನು ಬರೆಯಿರಿ :

| ಕ್ರ.ಸಂ. | ಧಾತು | ಸಂಕೇತ |
|---|---|---|
| 1. | ಕಾರ್ಬನ್ | |
| 2. | ಕೋಬಾಲ್ಟ್ | |
| 3. | ಮೆಗ್ನೀಸಿಯಮ್ | |
| 4. | ಸೋಡಿಯಮ್ | |
| 5. | ಚಿನ್ನ | |

**IV.** ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ :

1. ವೈದ್ಯಕೀಯ ತಾಪಮಾಪಕದಲ್ಲಿ ಬಳಸಿರುವ ದ್ರವರೂಪದ ಧಾತು ____________ .
2. ಗಂಧಕ ಮತ್ತು ಕಬ್ಬಿಣದ ರಜಗಳನ್ನು ಕಾಯಿಸಿದಾಗ ಉಂಟಾಗುವ ಸಂಯುಕ್ತ ________________ .
3. ಸೋಡಿಯಮ್ ಮತ್ತು ಕ್ಲೋರೀನ್‌ಗಳ ಸಂಯೋಗದಿಂದ ಉಂಟಾಗುವ ಸಂಯುಕ್ತ ________________ .
4. $O_2$ ಎಂಬುದು ಆಕ್ಸಿಜನ್‌ನ ________________ ಅನ್ನು ಪ್ರತಿನಿಧಿಸುತ್ತದೆ.
5. ಸಂಯುಕ್ತದಲ್ಲಿರುವ ಪರಮಾಣುಗಳ ಅನುಪಾತವನ್ನು ________________ ದಿಂದ ತಿಳಿಯಬಹುದು.

©KTBS Not to be republished

**V.** ಈ ಕೋಷ್ಟಕದಲ್ಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ :

| ಕ್ರ.ಸಂ. | ಸಂಯುಕ್ತ | ಘಟಕ ಧಾತುಗಳು | ಒಟ್ಟು ಪರಮಾಣುಗಳು ಮತ್ತು ಅವುಗಳ ಪ್ರಮಾಣಗಳು | ಅಣುಸೂತ್ರ |
|---|---|---|---|---|
| 1. | ನೀರು | ಹೈಡ್ರೋಜನ್<br>ಆಕ್ಸಿಜನ್ | _____<br>_____<br>_____ | $H_2O$ |
| 2. | ಕಾರ್ಬನ್ ಡೈಆಕ್ಸೈಡ್ | _____<br>_____ | 1 ಪರಮಾಣು<br>2 ಪರಮಾಣು<br>1 : 2 | _____ |
| 3. | ಸೋಡಿಯಮ್ ಕ್ಲೋರೈಡ್ | _____<br>_____ | _____<br>_____<br>_____ | NaCl |
| 4. | ಸಲ್ಫೂರಿಕ್ ಆಮ್ಲ | ಹೈಡ್ರೋಜನ್<br>ಗಂಧಕ<br>ಆಕ್ಸಿಜನ್ | _____<br>_____<br>_____<br>_____ | _____ |
| 5. | ಅಮೋನಿಯ | _____<br>_____ | 1 ಪರಮಾಣು<br>3 ಪರಮಾಣು<br>1 : 3 | _____ |
| 6. | ನೈಟ್ರಿಕ್ ಆಮ್ಲ | _____<br>_____<br>_____ | _____<br>_____<br>_____<br>_____ | $HNO_3$ |

©KTBS Not to be republished

**VI.** **ಗೆರೆ ಎಳೆದಿರುವ ಪದಗಳನ್ನು ಬದಲಾಯಿಸಿ, ಈ ಕೆಳಗಿನ ಹೇಳಿಕೆಗಳನ್ನು ಸರಿಪಡಿಸಿ :**

1. ಎಲ್ಲಾ ವಸ್ತುಗಳು ಅಣುಗಳೆಂಬ ಸೂಕ್ಷ್ಮ ಕಣಗಳಿಂದ ಮಾಡಲ್ಪಟ್ಟಿವೆ.

   ________________________________

2. ಅಲ್ಯೂಮಿನಿಯಮ್ ಒಂದು ಸಂಯುಕ್ತವಾಗಿದೆ.

   ________________________________

3. ಜಾನ್ ಡಾಲ್ಟನ್ ಧಾತುಗಳನ್ನು ಸೂಚಿಸಲು ಸಂಕೇತಗಳನ್ನು ಉಪಯೋಗಿಸುವುದನ್ನು ಮೊದಲ ಬಾರಿಗೆ ಬಳಕೆಗೆ ತಂದರು.

   ________________________________

   ________________________________

4. ಕೋಬಾಲ್ಟ್‌ನ ಸಂಕೇತ CO.

   ________________________________

5. $H_2Cl$ ಎಂಬುದು ಹೈಡ್ರೋಕ್ಲೋರಿಕ್ ಆಮ್ಲದ ಅಣುಸೂತ್ರವಾಗಿದೆ.

   ________________________________

**VII.** **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

1. ಸಕ್ಕರೆಯು ಒಂದು ಸಂಯುಕ್ತ ಎಂಬುದನ್ನು ಹೇಗೆ ತಿಳಿಯುವಿರಿ?

   ________________________________

   ________________________________

   ________________________________

©KTBS Not to be republished

2. ಗಾಳಿಯು ಒಂದು ಮಿಶ್ರಣವೇ ಹೊರತು, ಸಂಯುಕ್ತವಲ್ಲ. ಹೇಗೆ?

______________________________

______________________________

______________________________

3. ನಿತ್ಯ ಜೀವನದಲ್ಲಿ ಬಳಸುವ ಐದು ಸಂಯುಕ್ತಗಳನ್ನು ಹೆಸರಿಸಿ.

______________________

______________________

______________________

______________________

______________________

4. ಈ ಕೆಳಗಿನವುಗಳಲ್ಲಿ ಯಾವ ಕ್ರಿಯೆಯು ಸಂಯುಕ್ತ ಉಂಟಾಗುವಿಕೆಯನ್ನು ಸೂಚಿಸುತ್ತದೆ ಎಂಬುದನ್ನು ಅದರ ಮುಂದೆ (✓) ಗುರುತನ್ನು ಹಾಕುವುದರ ಮೂಲಕ ತಿಳಿಸಿ.

ಅ) ಮೆಗ್ನೀಸಿಯಮ್‌ಅನ್ನು ಗಾಳಿಯಲ್ಲಿ ಉರಿಸಿದಾಗ

ಆ) ಕಲ್ಲಿದ್ದಲನ್ನು ನೀರಿನಲ್ಲಿ ಸೇರಿಸಿದಾಗ

ಇ) ಹಾಲಿಗೆ ಸಕ್ಕರೆಯನ್ನು ಸೇರಿಸಿದಾಗ

ಈ) ಸಕ್ಕರೆಯನ್ನು ನೀರಿನಲ್ಲಿ ಕರಗಿಸಿದಾಗ

5. ನೀರು ದಹ್ಯ ಅನಿಲವಾದ ಹೈಡ್ರೋಜನ್ ಹಾಗೂ ದಹನಾನುಕೂಲಿಯಾದ ಆಕ್ಸಿಜನ್‌ನಿಂದ ಮಾಡಲ್ಪಟ್ಟಿದ್ದರೂ ಅದನ್ನು ಇಂಧನವಾಗಿ ಬಳಸಲು ಸಾಧ್ಯವಿಲ್ಲ. ಏಕೆ?

______________________________

______________________________

©KTBS Not to be republished

6. ಈ ಕೆಳಗಿನವುಗಳನ್ನು ಧಾತು ಹಾಗೂ ಸಂಯುಕ್ತಗಳಾಗಿ ವಿಂಗಡಿಸಿ.

ಸೋಡಿಯಮ್, ಸಕ್ಕರೆಯ ದ್ರಾವಣ, ಬೆಳ್ಳಿ, ಚಿನ್ನ, ಕಲ್ಲಿದ್ದಲು, ಸಾಬೂನು, ತಾಮ್ರದ ಪಾತ್ರೆ, ವಾಷಿಂಗ್ ಸೋಡಾ, ಕಾರ್ಬನ್ ಡೈಆಕ್ಸೈಡ್, ಸ್ಟೀಲ್ ಪಾತ್ರೆ.

| ಧಾತು | ಸಂಯುಕ್ತ |
|---|---|
| | |
| | |
| | |
| | |
| | |
| | |

7. ಈ ಕೆಳಗಿನ ಸಂಯುಕ್ತಗಳಲ್ಲಿರುವ ಧಾತುಗಳನ್ನು ಹೆಸರಿಸಿ, ಅವುಗಳ ಸಂಕೇತಗಳನ್ನು ಬರೆಯಿರಿ.

| ಕ್ರ.ಸಂ. | ಸಂಯುಕ್ತ | ಧಾತು | ಸಂಕೇತ |
|---|---|---|---|
| 1. | ಅಡುಗೆ ಉಪ್ಪು | | |
| 2. | ಅಡುಗೆ ಸೋಡಾ | | |
| 3. | ಮೀಥೇನ್ | | |
| 4. | ಸಲ್ಫ್ಯೂರಿಕ್ ಆಮ್ಲ | | |
| 5. | ಕ್ಯಾಲ್ಸಿಯಮ್ ಕಾರ್ಬೊನೇಟ್ | | |

©KTBS Not to be republished

**VIII.** ಕ್ರಮ ಸಂಖ್ಯೆ **(i)** ಮತ್ತು **(ii)** ರಲ್ಲಿ ನೀಡಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಕೊಟ್ಟಿರುವ ಚೌಕಗಳಲ್ಲಿ ತುಂಬಿ :

**(i)** ಆಕ್ಸಿಜನ್, 2, 1, ನೀರು, $H_2O$, ಹೈಡ್ರೋಜನ್.




©KTBS Not to be republished

**(ii)** ಮೆಗ್ನೀಸಿಯಮ್, **MgO,** ಮೆಗ್ನೀಸಿಯಮ್ ಆಕ್ಸೈಡ್, ಆಕ್ಸಿಜನ್.




©KTBS Not to be republished

**IX.** **ಗುಂಪಿಗೆ ಸೇರದ ಪದವನ್ನು ಅದರ ಕೆಳಗೆ ಗೆರೆ ಎಳೆದು ಗುರ್ತಿಸಿ :**

1. ತಾಮ್ರ, ಅಲ್ಯೂಮಿನಿಯಮ್, ಆಕ್ಸಿಜನ್, ಚಿನ್ನ.

2. ಉಪ್ಪು, ವಾಷಿಂಗ್ ಸೋಡ, ಬೇಕಿಂಗ್ ಸೋಡ, ಕ್ಲೋರೀನ್.

3. HCl, Mg, Fe, Co.

**X.** **ಮೊದಲ ಜೋಡಿ ಪದಗಳ ನಡುವಣ ಸಂಬಂಧವನ್ನು ಗ್ರಹಿಸಿ, ಎರಡನೆಯ ಜೋಡಿ ಪದಗಳನ್ನು ಪೂರ್ಣಗೊಳಿಸಿ :**

1. ಹೈಡ್ರೋಜನ್ : H :: ಗಂಧಕ : ______
2. ಆರ್ಗಾನ್ : Ar :: ಅಲ್ಯೂಮಿನಿಯಮ್ : ______
3. ಮೆಗ್ನೀಸಿಯಮ್ : Mg :: ಮ್ಯಾಂಗನೀಸ್ : ______
4. ತಾಮ್ರ : ಕುಪ್ರಮ್ :: ಕಬ್ಬಿಣ : ______
5. ಕಾರ್ಬನ್ ಡೈ ಆಕ್ಸೈಡ್ : $CO_2$ :: ಕಾರ್ಬನ್ ಮಾನಾಕ್ಸೈಡ್ : ______

**XI.** **ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿ :**

| ಕ್ರ.ಸಂ. | ಧಾತು | ಲ್ಯಾಟಿನ್ ಹೆಸರು | ಸಂಕೇತ |
|---|---|---|---|
| 1. | ಬೆಳ್ಳಿ | | |
| 2. | | | Au |
| 3. | | ಹೈಡ್ರಾರ್ಜಿರಮ್ | |
| 4. | ಪೊಟ್ಯಾಸಿಯಮ್ | | |
| 5. | | ನೇಟ್ರಿಯಮ್ | |

**XII.** **ಯೋಜನಾ ಕಾರ್ಯ :**

ಸೋಡಿಯಮ್ ಮತ್ತು ಕ್ಲೋರೀನ್ ಎರಡೂ ವಿಷಕಾರಿ ವಸ್ತುಗಳು. ಇವುಗಳ ಸಂಯೋಗದಿಂದ ಉಂಟಾದ ಉಪ್ಪನ್ನು ನಾವು ಪ್ರತಿದಿನ ಬಳಸುತ್ತೇವೆ. ಇದು ವಿಷಕಾರಿಯೇ ? ಇದೂ ಕೂಡ ಸ್ವಲ್ಪ ವಿಷಕಾರಿಯಾಗಿದೆಯೇ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಿ.

©KTBS Not to be republished

## ಘಟಕ – 4

## ಲೋಹಗಳು ಮತ್ತು ಅಲೋಹಗಳು

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ :**

1. ಆರ್ಗಾನ್ ಒಂದು ________________ ಅನಿಲ.
2. ಪೆನ್ಸಿಲ್‌ನಲ್ಲಿ ಬಳಸುವ ಅಲೋಹ ________________ .
3. ಸಾಮಾನ್ಯವಾಗಿ ಲೋಹಾಭಗಳು ________________ ಸ್ಥಿತಿಯಲ್ಲಿರುತ್ತವೆ.
4. ಪಾದರಸವು ________________ ರೂಪದಲ್ಲಿರುವ ಲೋಹವಾಗಿದೆ.
5. ವಸ್ತುಗಳು ಉರಿಯಲು ಸಹಾಯ ಮಾಡುವ ಅನಿಲ ರೂಪದಲ್ಲಿರುವ ಅಲೋಹ ________________ .

**II. ಈ ಕೆಳಗಿನವುಗಳಿಗೆ ಕಾರಣಗಳನ್ನು ಕೊಡಿ :**

1. ತಂತಿಗಳ ತಯಾರಿಕೆಯಲ್ಲಿ ತಾಮ್ರವನ್ನು ಬಳಸುತ್ತಾರೆ.

   ______________________________________________

   ______________________________________________

2. ಹೈಟೆನ್ಷನ್ (high tension) ತಂತಿಯನ್ನು ಅಲ್ಯೂಮಿನಿಯಮ್‌ನಿಂದ ತಯಾರಿಸುತ್ತಾರೆ.

   ______________________________________________

   ______________________________________________

3. ಹೀಲಿಯಮ್‌ಅನ್ನು ಜಡಾನಿಲ ಎನ್ನುವರು.

   ______________________________________________

   ______________________________________________

©KTBS Not to be republished

4. ಜರ್ಮೇನಿಯಮ್‌ಅನ್ನು ಲೋಹಾಭ ಎನ್ನುವರು.

5. ಪಾತ್ರೆಗಳನ್ನು ತಯಾರಿಸಲು ಮೆಗ್ನೀಸಿಯಮ್‌ಅನ್ನು ಬಳಸುವುದಿಲ್ಲ.

6. ಅಲ್ಯೂಮಿನಿಯಮ್ ತಟ್ಟೆಯನ್ನು ಕೆಳಗೆ ಬೀಳಿಸಿದಾಗ **ರಿಂಗಣಿಸುವ** ಶಬ್ದ ಉಂಟಾಗುತ್ತದೆ.

7. ಗ್ರಾಫೈಟ್ ತಾಮ್ರಕ್ಕಿಂತ ಉತ್ತಮ ವಿದ್ಯುತ್‌ವಾಹಕ ಮತ್ತು ಅಗ್ಗ(cheap)ವಾದ ಧಾತುವಾದರೂ ಅದನ್ನು ವಿದ್ಯುತ್ ತಂತಿಗಳ ತಯಾರಿಕೆಯಲ್ಲಿ ಬಳಸುವುದಿಲ್ಲ.

**III.** **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

1. ನಿಮ್ಮ ಶಿಕ್ಷಕರ ಸಹಾಯದಿಂದ, ಕೆಂಪಗೆ ಕಾಯಿಸಿದ ಕಬ್ಬಿಣದ ತುಂಡನ್ನು ಸತತವಾಗಿ ಸುತ್ತಿಗೆಯಿಂದ ಬಡಿಯಿರಿ. ಅದರ ಆಕಾರದಲ್ಲಿ ಆಗುವ ಬದಲಾವಣೆಯನ್ನು ಗಮನಿಸಿ. ಇದು ಕಬ್ಬಿಣದ ಯಾವ ಲಕ್ಷಣವನ್ನು ಸೂಚಿಸುತ್ತದೆ?

©KTBS Not to be republished

2. ಲೋಹಗಳ ಉಷ್ಣವಾಹಕತ್ವ ಗುಣವು ನಿತ್ಯ ಜೀವನದಲ್ಲಿ ಹೇಗೆ ಸಹಕಾರಿಯಾಗಿದೆ.

3. ಕೆಲವು ವಿದ್ಯುತ್‌ವಾಹಕ ತಂತಿಗಳನ್ನು ಸಂಗ್ರಹಿಸಿ. ಅವುಗಳನ್ನು ತಯಾರಿಸಲು ಬಳಸಲಾದ ಲೋಹಗಳನ್ನು ಪಟ್ಟಿ ಮಾಡಿ.

4. ನಿಮ್ಮ ಶಿಕ್ಷಕರ ಸಹಾಯದಿಂದ, ತಾಮ್ರದ ತಂತಿಯ ಒಂದು ತುದಿಯನ್ನು ಕೈಯಲ್ಲಿ ಹಿಡಿದುಕೊಂಡು, ಇನ್ನೊಂದು ತುದಿಯನ್ನು ಉರಿಯುತ್ತಿರುವ ಮೇಣದ ಬತ್ತಿಯ ಜ್ವಾಲೆಯಲ್ಲಿ ಕಾಯಿಸಿ. ಸ್ವಲ್ಪ ಸಮಯದ ನಂತರ ನಿಮಗೆ ಯಾವ ಅನುಭವ ಉಂಟಾಗುತ್ತದೆ? ನಿಮ್ಮ ತೀರ್ಮಾನವೇನು ?

5. ಜಡಾನಿಲಗಳು ರಾಸಾಯನಿಕವಾಗಿ ಸ್ಥಿರವಾಗಿರಲು ಕಾರಣವೇನು?

6. ಕರ್ನಾಟಕದಲ್ಲಿ ದೊರೆಯುವ ಲೋಹಗಳನ್ನು ಪಟ್ಟಿ ಮಾಡಿ. ಶಿಕ್ಷಕರು, ವಾಚನಾಲಯ ಮತ್ತು ಇಂಟರ್‌ನೆಟ್ (www.wikipedia.org) ಇತ್ಯಾದಿಗಳ ಸಹಾಯ ಪಡೆಯಿರಿ.

©KTBS Not to be republished

7. ಪ್ರಶ್ನೆ 6 ರಲ್ಲಿ ನೀವು ಪಟ್ಟಿ ಮಾಡಿರುವ ಲೋಹಗಳು ದೊರೆಯುವ ಪ್ರದೇಶಗಳನ್ನು ಕೆಳಗೆ ಕೊಟ್ಟಿರುವ ಕರ್ನಾಟಕ ರಾಜ್ಯದ ನಕ್ಷೆಯಲ್ಲಿ ಗುರ್ತಿಸಿ.



8. ರಾಜುವಿಗೆ ಒಂದು ವಸ್ತು ಸಿಕ್ಕಿದೆ. ಅದು ಲೋಹವೇ ಅಥವಾ ಅಲೋಹವೇ ಎಂದು ತಿಳಿಯಲು ಅವನಿಗೆ ನೀವು ನೀಡುವ ಸಲಹೆಗಳು ಏನು?

©KTBS Not to be republished

9. ಲೋಹಗಳಲ್ಲಿ ಪತ್ರಶೀಲತ್ವ ಲಕ್ಷಣ ಇಲ್ಲದಿದ್ದರೆ ಉಂಟಾಗುತ್ತಿದ್ದ ಪರಿಣಾಮಗಳೇನು ?

______________________________

______________________________

______________________________

## IV. ಯೋಜನಾ ಕಾರ್ಯ :

1. ನಿಮ್ಮ ಸುತ್ತಮುತ್ತ ಸಿಗುವ ಲೋಹ ಮತ್ತು ಅಲೋಹಗಳನ್ನು ಸಂಗ್ರಹಿಸಿ, ಅವುಗಳ ಲಕ್ಷಣಗಳನ್ನು ಪಟ್ಟಿ ಮಾಡಿ.

| ಕ್ರ.ಸಂ. | ಲೋಹ | ಲಕ್ಷಣಗಳು |
|---|---|---|
| 1. | | |
| 2. | | |
| 3. | | |
| 4. | | |
| 5. | | |

| ಕ್ರ.ಸಂ. | ಅಲೋಹ | ಲಕ್ಷಣಗಳು |
|---|---|---|
| 1. | | |
| 2. | | |
| 3. | | |
| 4. | | |
| 5. | | |

©KTBS Not to be republished

2. ನಿಮ್ಮ ಶಿಕ್ಷಕರ ಸಹಾಯದಿಂದ, ನಿತ್ಯ ಜೀವನದಲ್ಲಿ ಬಳಸುವ ಕೆಲವು ಆಹಾರದ ಡಬ್ಬಗಳು ಮತ್ತು ರಸಗೊಬ್ಬರಗಳ ಚೀಲಗಳನ್ನು ಸಂಗ್ರಹಿಸಿ. ಅವುಗಳ ಮೇಲೆ ಬರೆದಿರುವ ಲೋಹಗಳ ಹೆಸರನ್ನು ಪಟ್ಟಿಮಾಡಿ.

| ಕ್ರ.ಸಂ. | ಆಹಾರದ ಡಬ್ಬಗಳು / ರಸಗೊಬ್ಬರಗಳ ಚೀಲಗಳು | ಲೋಹಗಳು |
|---|---|---|
| 1. | | |
| 2. | | |
| 3. | | |
| 4. | | |
| 5. | | |

3. 15 ಸೆಂ.ಮೀ. ಉದ್ದ ಮತ್ತು ಸಮಾನ ದಪ್ಪವಿರುವ ಅಲ್ಯೂಮಿನಿಯಮ್, ತಾಮ್ರ, ಕಬ್ಬಿಣ ಮತ್ತು ಸೀಸದ ಒಂದೊಂದು ಪಟ್ಟಿಯನ್ನು ತೆಗೆದುಕೊಳ್ಳಿ. ಚಿತ್ರದಲ್ಲಿ ತೋರಿಸಿರುವಂತೆ ಅವುಗಳನ್ನು ಜೋಡಿಸಿ.




ಮೇಣದ ಸಣ್ಣ ತುಂಡುಗಳನ್ನು ಪ್ರತಿ ಪಟ್ಟಿಯ ತುದಿಯಲ್ಲಿ ಅಂಟಿಸಿ. ಅವುಗಳನ್ನು ಮತ್ತೊಂದು ತುದಿಯಲ್ಲಿ ಕಾಯಿಸಿ. ಯಾವ ಪಟ್ಟಿಗೆ ಅಂಟಿಸಿದ ಮೇಣ ಮೊದಲು ಕರಗುತ್ತದೆ ಮತ್ತು ಯಾವ ಪಟ್ಟಿಗೆ ಅಂಟಿಸಿದ ಮೇಣ ಕೊನೆಯಲ್ಲಿ ಕರಗುತ್ತದೆ ಎಂಬುದನ್ನು ಪತ್ತೆ ಹಚ್ಚಿ. ಅವುಗಳ ವಾಹಕತ್ವವನ್ನು ಆಧರಿಸಿ, ಅವುಗಳನ್ನು ಏರಿಕೆಯ ಕ್ರಮದಲ್ಲಿ ಬರೆಯಿರಿ.

________ ________ ________ ________

©KTBS Not to be republished

## ಘಟಕ – 5

## ಮಿಶ್ರಣದಲ್ಲಿರುವ ವಸ್ತುಗಳನ್ನು ಬೇರ್ಪಡಿಸುವಿಕೆ

**I. ಮೊದಲ ಅಥವಾ ಎರಡನೆಯ ಜೋಡಿ ಪದಗಳ ನಡುವಣ ಸಂಬಂಧವನ್ನು ಗ್ರಹಿಸಿ, ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ :**

1. ಕಿತ್ತಳೆ ಪಾನಕ : ಮಿಶ್ರಣ :: ಹೈಡ್ರೋಜನ್ ಕ್ಲೋರೈಡ್ : __________

2. ಧಾನ್ಯದ ತೆನೆ : __________ :: ಹಿಟ್ಟು : ಜರಡಿ ಹಿಡಿಯುವಿಕೆ.

3. ಅಯೋಡಿನ್ ಮತ್ತು ಮರಳು : ಉತ್ಪತನ :: ಕಬ್ಬಿಣ ಮತ್ತು ಮರಳು __________

4. ಗಾಳಿಯಿಂದ ಬೇರ್ಪಡಿಸುವಿಕೆ : __________ :: ಅಯಸ್ಕಾಂತದಿಂದ ಬೇರ್ಪಡಿಸುವಿಕೆ : ಕಾಂತೀಯ ಬೇರ್ಪಡಿಸುವಿಕೆ.

**II. ಈ ಕೆಳಗೆ ಕೊಟ್ಟಿರುವ ಮಿಶ್ರಣಗಳಲ್ಲಿರುವ ವಸ್ತುಗಳನ್ನು ಬೇರ್ಪಡಿಸಲು ಬಳಸುವ ವಿಧಾನಗಳನ್ನು ಹೆಸರಿಸಿ :**

1. ಗೋಲಿಗಳು ಮತ್ತು ಮರಳಿನ ಮಿಶ್ರಣ : __________

2. ರಾಗಿ ಹಿಟ್ಟು ಮತ್ತು ರಾಗಿಯ ಮಿಶ್ರಣ : __________

3. ಉಪ್ಪಿನ ದ್ರಾವಣ ಮತ್ತು ಹರಳೆಣ್ಣೆಯ ಮಿಶ್ರಣ : __________

4. ಕರ್ಪೂರದ ಪುಡಿ ಮತ್ತು ಮಣ್ಣಿನ ಮಿಶ್ರಣ : __________

5. ಗೋದಿ ಹಿಟ್ಟು ಮತ್ತು ಕಬ್ಬಿಣದ ಚೂರುಗಳ ಮಿಶ್ರಣ : __________

©KTBS
Not to be republished

**III. ಕೆಳಗೆ ಕೊಟ್ಟಿರುವ ಹೇಳಿಕೆಗಳು ಸರಿ ಇದ್ದರೆ 'ಸರಿ' ಎಂದೂ, ತಪ್ಪಾಗಿದ್ದರೆ 'ತಪ್ಪು' ಎಂದೂ ಆವರಣದಲ್ಲಿ ಬರೆಯಿರಿ. ತಪ್ಪಿರುವ ಹೇಳಿಕೆಯನ್ನು ಸರಿಪಡಿಸಿ ಬರೆಯಿರಿ :**

1. ನೀರು ಮತ್ತು ಹಾಲಿನ ಮಿಶ್ರಣವನ್ನು ಬಾಷ್ಪೀಭವನ ವಿಧಾನದಿಂದ ಪ್ರತ್ಯೇಕಿಸಬಹುದು. (        )

_______________________________________________

_______________________________________________

2. ಶೋಧಿಸುವಿಕೆಯಿಂದ ಅತ್ಯಂತ ಶುದ್ಧ ನೀರನ್ನು ಪಡೆಯಬಹುದು. (        )

_______________________________________________

_______________________________________________

3. ಅರಿಸಿನ ಪುಡಿ ಮತ್ತು ಕರ್ಪೂರದ ಪುಡಿಯ ಮಿಶ್ರಣವನ್ನು ತೂರುವಿಕೆ ವಿಧಾನದಿಂದ ಬೇರ್ಪಡಿಸಬಹುದು. (        )

_______________________________________________

_______________________________________________

4. ನೀರು ಮತ್ತು ಎಣ್ಣೆಯ ಮಿಶ್ರಣವನ್ನು ಬೇರ್ಪಡಿಸುವ ಆಲಿಕೆ ವಿಧಾನದಿಂದ ಪ್ರತ್ಯೇಕಿಸಬಹುದು. (        )

_______________________________________________

_______________________________________________

5. ಸಮುದ್ರ ಮಟ್ಟದಲ್ಲಿ ನೀರಿನ ಕುದಿಯುವ ಬಿಂದು $102^{0}C$. (        )

_______________________________________________

_______________________________________________

©KTBS Not to be republished

**IV.** ಈ ಕೆಳಗೆ ಕೆಲವು ಉಪಕರಣಗಳನ್ನು ಕೊಟ್ಟಿದೆ. ಬೇರ್ಪಡಿಸುವಿಕೆಯ ಯಾವ ವಿಧಾನದಲ್ಲಿ ಇವುಗಳನ್ನು ಬಳಸುತ್ತಾರೆ ಎಂಬುದನ್ನು ಉಪಕರಣದ ಕೆಳಗೆ ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ :

| | |
|---|---|
|  |  |
| | |
|  |  |
| | |

**V.** ಈ ಕೋಷ್ಟಕವನ್ನು ಸೂಕ್ತ ಉತ್ತರಗಳಿಂದ ಪೂರ್ಣಗೊಳಿಸಿ.

| ಕ್ರ.ಸಂ. | ಬೇರ್ಪಡಿಸುವಿಕೆಯ ವಿಧಾನಗಳು | ಉದ್ದೇಶ |
|---|---|---|
| 1. | ಕೈಗಳಿಂದ ಆರಿಸುವಿಕೆ | ಮಿಶ್ರಣದಲ್ಲಿರುವ ದೊಡ್ಡ ಗಾತ್ರದ, ಕಡಿಮೆ ಪ್ರಮಾಣದಲ್ಲಿರುವ ವಸ್ತುಗಳನ್ನು ಬೇರ್ಪಡಿಸುವುದು. |
| 2. | ತೂರುವಿಕೆ | |
| 3. | ಜರಡಿ ಹಿಡಿಯುವಿಕೆ | |
| 4. | | ನೀರಿನಲ್ಲಿ ಕರಗದೇ ಇರುವ ವಸ್ತುವನ್ನು ಬೇರ್ಪಡಿಸುವುದು. |
| 5. | ಬಾಷ್ಪೀಭವನ | |
| 6. | | ಘನವಸ್ತುವನ್ನು ನೇರವಾಗಿ ಆವಿಯಾಗಿ ಪರಿವರ್ತಿಸುವುದು. |
| 7. | ಬೇರ್ಪಡಿಸುವ ಆಲಿಕೆ ವಿಧಾನ | |
| 8. | | ಮಿಶ್ರಣದಲ್ಲಿರುವ ಕಾಂತೀಯ ವಸ್ತುವನ್ನು ಬೇರ್ಪಡಿಸುವುದು. |

©KTBS Not to be republished

**VI. ಯೋಜನಾ ಕಾರ್ಯ :**

1. ಒಂದು ಮಿಶ್ರಣದಲ್ಲಿರುವ ವಸ್ತುಗಳನ್ನು ಬೇರ್ಪಡಿಸಲು ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ವಿಧಾನಗಳನ್ನು ಬಳಸಬೇಕಾಗುತ್ತದೆ. ಕೆಳಗೆ ಕೊಟ್ಟಿರುವ ಸನ್ನಿವೇಶಗಳಲ್ಲಿ ಬಳಸಬಹುದಾದ ಬೇರ್ಪಡಿಸುವಿಕೆಯ ವಿಧಾನಗಳನ್ನು ಹೆಸರಿಸಿ. ಪ್ರತೀ ಸಂದರ್ಭದಲ್ಲಿ ಅವಶ್ಯಕವಿರುವ ಉಪಕರಣಗಳನ್ನು ಪಟ್ಟಿ ಮಾಡಿ.

1. ಬಾಬುವು ನೀರು, ಸಕ್ಕರೆ ಮತ್ತು ಮರಳನ್ನು ಬೆರೆಸಿದ್ದಾನೆ.

   ______________________________

   ______________________________

2. ಕಲ್ಪನಾಳಿಗೆ ಅವಳ ಗೆಳತಿಯು ಸವಾಲನ್ನೊಡ್ಡಿದ್ದು, ಅದರಂತೆ ಅವಳು ಅಡುಗೆ ಎಣ್ಣೆ, ಸಕ್ಕರೆ ದ್ರಾವಣ ಮತ್ತು ಕಬ್ಬಿಣದ ಚೂರುಗಳನ್ನು ಮಿಶ್ರಣದಿಂದ ಬೇರ್ಪಡಿಸಬೇಕಾಗಿದೆ.

   ______________________________

   ______________________________

3. ರಾಜೇಶನ ಬಳಿ ನ್ಯಾಫ್ತಲೀನ್ ಪುಡಿ, ತೊಗರಿ ಬೇಳೆ, ಮಣ್ಣು ಮತ್ತು ಕಬ್ಬಿಣದ ಚೂರಿನ ಮಿಶ್ರಣವಿದೆ.

   ______________________________

   ______________________________

4. ಒಂದು ಲೋಟದಲ್ಲಿರುವ ಮಣ್ಣುನೀರಿಗೆ ಉಪ್ಪನ್ನು ಸೇರಿಸಲಾಗಿದೆ.

   ______________________________

   ______________________________

5. ಮಂಜು ರಾಗಿ ಮತ್ತು ಸಾಸುವೆ ಕಾಳುಗಳನ್ನು ಬೆರೆಸಿದ್ದಾನೆ.

   ______________________________

   ______________________________

©KTBS Not to be republished

2. ನಿಮ್ಮ ಸುತ್ತಮುತ್ತ ದೊರೆಯುವ ಕನಿಷ್ಟ 15 ಮಿಶ್ರಣಗಳನ್ನು ಸಂಗ್ರಹಿಸಿ. ಆ ಮಿಶ್ರಣಗಳ ಘಟಕಗಳು ಮತ್ತು ಅವುಗಳನ್ನು ಬೇರ್ಪಡಿಸುವ ವಿಧಾನವನ್ನು ಪಟ್ಟಿ ಮಾಡಿ. ಕೆಳಗೆ ಕೊಟ್ಟಿರುವ ಕೋಷ್ಟಕವನ್ನು ಬಳಸಿ.

| ಕ್ರ.ಸಂ. | ಮಿಶ್ರಣ | ಘಟಕಗಳು | ಬೇರ್ಪಡಿಸುವ ವಿಧಾನ |
|---|---|---|---|
| 1. | | | |
| 2. | | | |
| 3. | | | |
| 4. | | | |
| 5. | | | |
| 6. | | | |
| 7. | | | |
| 8. | | | |
| 9. | | | |
| 10. | | | |
| 11. | | | |
| 12. | | | |
| 13. | | | |
| 14. | | | |
| 15. | | | |

©KTBS Not to be republished

## ಘಟಕ – 6

## ವಿದ್ಯುತ್‌ವಾಹಕಗಳು ಮತ್ತು ನಿರೋಧಕಗಳು

**I. 'ಅ' ಪಟ್ಟಿಯಲ್ಲಿ ಕೊಟ್ಟಿರುವ ವಸ್ತುಗಳನ್ನು 'ಆ' ಪಟ್ಟಿಯಲ್ಲಿ ಕೊಟ್ಟಿರುವ ಅವುಗಳ ಲಕ್ಷಣ ಗಳೊಂದಿಗೆ ಹೊಂದಿಸಿ ಬರೆಯಿರಿ :**

| ಅ | ಆ |
|---|---|
| 1. ಶುಷ್ಕ ಕೋಶ | ಅ) ವಿದ್ಯುತ್ ನಿರೋಧಕ |
| 2. ತಾಮ್ರದ ತಂತಿ | ಆ) ಅತಿ ವಾಹಕ |
| 3. ಪ್ಲಾಸ್ಟಿಕ್ ಕುರ್ಚಿ | ಇ) ಅರೆ ವಾಹಕ |
| 4. ಜರ್ಮೇನಿಯಮ್ | ಈ) ವಿದ್ಯುತ್ ವಾಹಕ |
| | ಉ) ವಿದ್ಯುಚ್ಛಕ್ತಿಯ ಆಕರ |

**II. ಇವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಅದರ ಕೆಳಗೆ ಗೆರೆ ಎಳೆಯುವುದರ ಮೂಲಕ ಗುರ್ತಿಸಿ :**

1. ಶುಷ್ಕಕೋಷ, ಜನರೇಟರ್, ಬ್ಯಾಟರಿ, ವಾಷಿಂಗ್‌ಮಷೀನ್.
2. ವಿದ್ಯುತ್ ಇಸ್ತ್ರಿಪೆಟ್ಟಿಗೆ, ಮಿಕ್ಸರ್, ಪ್ರೆಷರ್ ಕುಕ್ಕರ್, ಕಂಪ್ಯೂಟರ್.
3. ತಾಮ್ರ, ಕಬ್ಬಿಣ, ಗಾಜು, ಪ್ಲಾಟಿನಮ್.
4. ರಬ್ಬರ್, ಅಲ್ಯೂಮಿನಿಯಮ್, ಗಾಳಿ, ಒಣಮರ.
5. ಲೋಹದ ತಂತಿ, ಪ್ಲಗ್‌ನ ಮೇಲ್ಭಾಗ, ಗೋಡೆಯ ಸ್ವಿಚ್ ಸಾಕೆಟ್‌ನಲ್ಲಿರುವ ರಂಧ್ರಗಳು, ಪ್ಲಗ್ ಪಿನ್.

©KTBS Not to be republished

**III.** **ಕೆಳಗೆ ಕೊಟ್ಟಿರುವ ಹೇಳಿಕೆಗಳು ಸರಿ ಇದ್ದರೆ 'ಸರಿ' ಎಂದೂ, ತಪ್ಪಾಗಿದ್ದರೆ 'ತಪ್ಪು' ಎಂದೂ ಆವರಣದಲ್ಲಿ ಬರೆಯಿರಿ. ತಪ್ಪಿರುವ ಹೇಳಿಕೆಯನ್ನು ಸರಿ ಪಡಿಸಿ ಬರೆಯಿರಿ :**

1. ಅತ್ಯಂತ ಹೆಚ್ಚು ಬಳಕೆಯಲ್ಲಿರುವ ವಾಹಕವೆಂದರೆ ಅಲ್ಯೂಮಿನಿಯಮ್. (          )

______________________________

2. ಗಾಳಿಯು ಒಂದು ವಿದ್ಯುತ್ ವಾಹಕ. (          )

______________________________

3. ವಿದ್ಯುತ್ತನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ತಾಮ್ರದ ತಂತಿಗಳನ್ನು ಬಳಸಲಾಗುತ್ತದೆ. (          )

______________________________

4. ಸಿಲಿಕಾನ್ ಒಂದು ವಿದ್ಯುತ್ ನಿರೋಧಕ. (          )

______________________________

5. ವಾಹಕಗಳ ಮೇಲಿರುವ ನಿರೋಧಕವು ವಿದ್ಯುತ್ ಆಘಾತವನ್ನು ತಡೆಯುತ್ತದೆ. (          )

______________________________

6. ವಿದ್ಯುತ್ ಉಪಕರಣಗಳನ್ನು ಬಳಸುವಾಗ ನಾವು ಮರದ ಹಲಗೆಯ ಮೇಲೆ ನಿಲ್ಲಬೇಕು. (          )

______________________________

©KTBS Not to be republished

**IV.** ಈ ಚಿತ್ರಗಳಲ್ಲಿ ಕೊಟ್ಟಿರುವ ಸನ್ನಿವೇಶಗಳನ್ನು ಎಚ್ಚರಿಕೆಯಿಂದ ಗಮನಿಸಿ. ಪ್ರತಿ ಸನ್ನಿವೇಶಕ್ಕೂ ಹೊಂದಿಕೆಯಾಗುವ ವಿದ್ಯುತ್ ಸುರಕ್ಷಾ ನಿಯಮವನ್ನು ಬರೆಯಿರಿ. ಕ್ರಮಸಂಖ್ಯೆ **1** ರಲ್ಲಿ ನೀಡಿರುವ ಉದಾಹರಣೆಯನ್ನು ಗಮನಿಸಿ :

| ಕ್ರ.ಸಂ. | ಸನ್ನಿವೇಶ | ವಿದ್ಯುತ್ ಸುರಕ್ಷಾ ನಿಯಮ |
|---|---|---|
| 1. |  | ಗೋಡೆಯಲ್ಲಿರುವ ಸ್ವಿಚ್ ಸಾಕೆಟ್‌ಗಳು ಮಕ್ಕಳ ಕೈಗೆಟುಕದಷ್ಟು ಎತ್ತರದಲ್ಲಿರಲಿ. |
| 2. |  | |
| 3. |  | |
| 4. |  | |
| 5. |  | |

©KTBS Not to be republished

**V.** **ಈ ಕೆಳಗಿನವುಗಳಿಗೆ ಕಾರಣಗಳನ್ನು ಕೊಡಿ :**

1. ವಾಹಕಗಳಿಲ್ಲದಿದ್ದರೆ ವಿದ್ಯುಚ್ಛಕ್ತಿಯಿಂದ ಏನೂ ಉಪಯೋಗವಿಲ್ಲ.

   ______________________________________

2. ನಿರೋಧಕವು ವಿದ್ಯುತ್ ಆಘಾತದಿಂದ ರಕ್ಷಣೆ ನೀಡುತ್ತದೆ.

   ______________________________________

3. ಜರ್ಮೇನಿಯಮ್ ಮತ್ತು ಸಿಲಿಕಾನ್‌ಗಳನ್ನು ಅರೆವಾಹಕಗಳು ಎನ್ನುವರು.

   ______________________________________

**VI.** **ಚಿತ್ರದಲ್ಲಿರುವ ವಿದ್ಯುತ್ ಉಪಕರಣಗಳಲ್ಲಿರುವ ವಾಹಕ ಭಾಗಗಳನ್ನು 'ವಾ' ಎಂದು ನಿರೋಧಕ ಭಾಗಗಳನ್ನು 'ನಿ' ಎಂದು ಗುರ್ತಿಸಿ :**

| | |
|---|---|
|  |  |
|  |  |
|  |  |
|  |  |

©KTBS
Not to be republished

## VII. ಯೋಜನಾ ಕಾರ್ಯ :

1. ನಿರೋಧನ ಹೊಂದಿರುವ ತಾಮ್ರದ ತಂತಿ, ಸಣ್ಣ ಬಲ್ಬ್, ಬಲ್ಬ್ ಹೋಲ್ಡರ್ ಮತ್ತು ಎರಡು ಕ್ರೊಕೋಡೈಲ್ ಪಿನ್ (ಎಲ್ಲಾ ವಿದ್ಯುತ್ ಉಪಕರಣಗಳ ಅಂಗಡಿಯಲ್ಲಿ ದೊರೆಯುತ್ತವೆ) ಗಳನ್ನು ತೆಗೆದುಕೊಳ್ಳಿ. ಚಿತ್ರದಲ್ಲಿ ತೋರಿಸಿರುವಂತೆ ಇವುಗಳನ್ನು ಸಂಪರ್ಕಿಸಿ.



₹ 5 ನಾಣ್ಯ, ಅಳಿಸುವ ರಬ್ಬರ್, ಸೈಕಲ್ ಕೀ, ಬಟ್ಟೆಪಿನ್ನು, ಒಣಮರದ ಸಣ್ಣತುಂಡು, ಗಾಜಿನ ಬಳೆಯ ಚೂರು, ಸ್ಟೀಲ್‌ಚಮಚ, ಪ್ಲಾಸ್ಟಿಕ್‌ಚಮಚ ಇವುಗಳನ್ನು ಒಂದಾದ ನಂತರ ಇನ್ನೊಂದರಂತೆ ಕ್ರೊಕೋಡೈಲ್ ಪಿನ್‌ಗಳ ಮಧ್ಯೆ ಸಿಕ್ಕಿಸಿ.

ಪ್ರತಿ ಸಂದರ್ಭದಲ್ಲೂ ಬಲ್ಬನ್ನು ಗಮನಿಸಿ. ಹಾಗೂ ಈ ಕೆಳಗಿನ ಕೋಷ್ಟಕವನ್ನು ಭರ್ತಿ ಮಾಡಿ.

| ವಸ್ತು | ವೀಕ್ಷಣೆ | ತೀರ್ಮಾನ |
|---|---|---|
| ₹ 5 ನಾಣ್ಯ | ಬಲ್ಬ್ ಹೊತ್ತಿಕೊಳ್ಳುತ್ತದೆ | ವಾಹಕ |
| ಅಳಿಸುವ ರಬ್ಬರ್ | | |
| ಸೈಕಲ್ ಕೀ | | |
| ಬಟ್ಟೆಪಿನ್ನು | | |
| ಒಣಮರದ ಸಣ್ಣತುಂಡು | | |
| ಗಾಜಿನ ಬಳೆಯ ಚೂರು | | |
| ಸ್ಟೀಲ್ ಚಮಚ | | |
| ಪ್ಲಾಸ್ಟಿಕ್ ಚಮಚ | | |

2. ವಿದ್ಯುಚ್ಛಕ್ತಿಯನ್ನು ಸಾಗಿಸುವ ಹೈಟೆನ್ಷನ್(high tension) ವಿದ್ಯುತ್ ಕಂಬಗಳ ಮೇಲಿರುವ ತಂತಿಗಳಲ್ಲಿ ಸ್ವಲ್ಪ ವಿದ್ಯುತ್ ನಷ್ಟವಾಗುವುದರ ಬಗ್ಗೆ ನಿಮ್ಮ ಶಿಕ್ಷಕರು, ವಾಚನಾಲಯ ಮತ್ತು ಕೆ.ಪಿ.ಟಿ.ಸಿ.ಎಲ್. ಇತ್ಯಾದಿಗಳಿಂದ ಮಾಹಿತಿ ಸಂಗ್ರಹಿಸಿ.

©KTBS Not to be republished

## ಘಟಕ – 7

## ಅಳತೆಯ ಸಾಧನಗಳು

**I.** **ದ್ರವ್ಯದ ಮೂಲಭೂತ ಲಕ್ಷಣಗಳ ಬಗ್ಗೆ ಇರುವ ಈ ಕೆಳಗಿನ ಪೂರ್ಣ / ಅಪೂರ್ಣ ಮುಖ್ಯ ಹೇಳಿಕೆಗಳನ್ನು ಗಮನಿಸಿ. ಪ್ರತಿಯೊಂದು ಮುಖ್ಯ ಹೇಳಿಕೆಗೆ ಸಂಬಂಧಿಸಿದಂತೆ ಅದರ ಕೆಳಗೆ ಮೂರು ಹೇಳಿಕೆಗಳನ್ನು ನೀಡಲಾಗಿದೆ. ತಪ್ಪಾಗಿರುವ ಹೇಳಿಕೆಗಳನ್ನು ಪತ್ತೆ ಮಾಡಿ, ಅವುಗಳ ಮುಂದೆ (✕) ಗುರುತನ್ನು ಹಾಕಿ. ಸರಿಯಾಗಿರುವ ಹೇಳಿಕೆಗಳನ್ನು ಪತ್ತೆ ಮಾಡಿ, ಅವುಗಳ ಮುಂದೆ (✓) ಗುರುತನ್ನು ಹಾಕಿ :**

1. ವಸ್ತುವಿನಲ್ಲಿರುವ ದ್ರವ್ಯದ ಪ್ರಮಾಣವೇ ದ್ರವ್ಯರಾಶಿ.

   ಅ) ವಿಶ್ವದಲ್ಲಿರುವ ಎಲ್ಲಾ ವಸ್ತುಗಳೂ ದ್ರವ್ಯರಾಶಿ ಹೊಂದಿವೆ.

   ಆ) ಭೂಮಿಯ ಗುರುತ್ವದೊಂದಿಗೆ ವಸ್ತುವಿನ ದ್ರವ್ಯರಾಶಿಯೂ ಬದಲಾಗುತ್ತದೆ.

   ಇ) ಒಂದು ವಸ್ತುವಿಗೆ ಸ್ವಲ್ಪ ದ್ರವ್ಯ ಸೇರಿಸದ ಅಥವಾ ವಸ್ತುವಿನಿಂದ ಸ್ವಲ್ಪ ದ್ರವ್ಯ ತೆಗೆಯದ ಹೊರತು, ಆ ವಸ್ತುವಿನ ದ್ರವ್ಯರಾಶಿ ಸ್ಥಿರವಾಗಿರುತ್ತದೆ.

2. ಒಂದು ವಸ್ತುವಿನ ದ್ರವ್ಯರಾಶಿಯ ಮೇಲೆ ವರ್ತಿಸುತ್ತಿರುವ ಗುರುತ್ವ ಬಲವೇ ತೂಕ.

   ಅ) ಭೂಮಿಯ ಮೇಲಿರುವ ಬೇರೆ, ಬೇರೆ ಸ್ಥಳಗಳಲ್ಲಿ ಒಂದು ವಸ್ತುವಿನ ತೂಕ ಸ್ವಲ್ಪ ಬದಲಾಗುತ್ತದೆ.

   ಆ) ವಸ್ತುವಿನ ತೂಕವನ್ನು ಸ್ಪ್ರಿಂಗ್ ತ್ರಾಸು ಉಪಯೋಗಿಸಿ ಅಳೆಯಬಹುದು.

   ಇ) ಚಂದ್ರನ ಮೇಲಿರುವ ಒಂದು ವಸ್ತುವಿನ ತೂಕವು, ಅದು ಭೂಮಿಯ ಮೇಲಿದ್ದಾಗಿನ ತೂಕದಷ್ಟೇ ಇರುತ್ತದೆ.

3. $\text{ಸಾಂದ್ರತೆ} = \frac{\text{ದ್ರವ್ಯರಾಶಿ}}{\text{ಗಾತ್ರ}}$

   ಅ) ಒಂದು ವಸ್ತುವಿನ ಸಾಂದ್ರತೆಯು, ಅದರಲ್ಲಿನ ಅಣುಗಳು ಹೇಗೆ ಜೋಡಿಸಲ್ಪಟ್ಟಿವೆ ಎನ್ನುವುದನ್ನು ಅವಲಂಬಿಸಿದೆ.

   ಆ) ಒಂದು ಖಾಲಿ ಪ್ಲಾಸ್ಟಿಕ್ ಪೆಟ್ಟಿಗೆಯ ಸಾಂದ್ರತೆಗಿಂತಲೂ, ಅದೇ ಗಾತ್ರದ ಒಂದು ಖಾಲಿ ಮರದ ಪೆಟ್ಟಿಗೆಯ ಸಾಂದ್ರತೆ ಜಾಸ್ತಿಯಿರುತ್ತದೆ.

   ಇ) ಒಂದು ವಸ್ತುವಿನ ಗಾತ್ರವನ್ನು ಹೆಚ್ಚಿಸಿದರೆ, ಅದರ ಸಾಂದ್ರತೆಯೂ ಹೆಚ್ಚಾಗುತ್ತದೆ.

©KTBS Not to be republished

4. ವಸ್ತುಗಳು ನೀರಿನಲ್ಲಿ ಪೂರ್ತಿಯಾಗಿ ಅಥವಾ ಭಾಗಶಃ ಮುಳುಗಿದಾಗ

ಅ) ನೀರು ಆ ವಸ್ತುವಿನ ಮೇಲೆ ಮೇಲ್ಮುಖ ಬಲ ಪ್ರಯೋಗಿಸುತ್ತದೆ.

ಆ) ನೀರಿನಲ್ಲಿ ತನಗಾಗಿ ಸ್ಥಳಾವಕಾಶ ಮಾಡಿಕೊಳ್ಳಲು ಆ ವಸ್ತು ಸ್ವಲ್ಪ ನೀರನ್ನು ಹೊರದೂಡುತ್ತದೆ.

ಇ) ವಸ್ತುವಿನಿಂದ ಹೊರದೂಡಲ್ಪಟ್ಟ ನೀರಿನ ತೂಕವು ಆ ವಸ್ತುವಿನ ಒಟ್ಟು ತೂಕದಷ್ಟೇ ಇರುತ್ತದೆ.

5. ನೀರಿನ ಸಾಂದ್ರತೆಯನ್ನು ಅಳೆಯಲು ಹೈಡ್ರೋಮೀಟರನ್ನು ಬಳಸಲಾಗುತ್ತದೆ.

ಅ) ಹೈಡ್ರೋಮೀಟರ್, ಆರ್ಕಿಮಿಡೀಸ್ ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತದೆ.

ಆ) ಹೈಡ್ರೋಮೀಟರನ್ನು ಬಳಸಿಕೊಂಡು ದ್ರವಗಳ ಸಾಪೇಕ್ಷ ಸಾಂದ್ರತೆಯನ್ನು ಕೂಡ ಕಂಡುಹಿಡಿಯಬಹುದು.

ಇ) ಹೈಡ್ರೋಮೀಟರ್ ಒಂದು ಉದ್ದನೆಯ ಲೋಹದ ಕೊಳವೆಯಿಂದ ಮಾಡಲ್ಪಟ್ಟಿದೆ.

**II. 'ಅ' ಪಟ್ಟಿಯಲ್ಲಿ ಕೊಟ್ಟಿರುವ ಸಾಧನಗಳ ಭಾಗಗಳನ್ನು 'ಆ' ಪಟ್ಟಿಯಲ್ಲಿ ಕೊಟ್ಟಿರುವ ಸಾಧನಗಳೊಂದಿಗೆ ಹೊಂದಿಸಿ ಬರೆಯಿರಿ :**

| ಅ | ಆ |
|---|---|
| 1) ತಿರುಗಣೆ ಮೇಲಿನ ದಂಡ | ಅ) ಹೈಡ್ರೋಮೀಟರ್ |
| 2) ಕೊಕ್ಕೆ | ಆ) ಸಾಮಾನ್ಯ ತುಲಾಯಂತ್ರ |
| 3) ಗಾಜಿನ ಕೊಳವೆ | ಇ) ಭೌತ ತುಲಾಯಂತ್ರ |
| 4) ದ್ರವ್ಯ ತುಂಬಿರುವ ಬಲಭಾಗದ ತಟ್ಟೆ | ಈ) ಅಳತೆಯ ಜಾಡಿ |
| | ಉ) ಸ್ಪ್ರಿಂಗ್ ತ್ರಾಸು |

©KTBS
Not to be republished

**III.** **ಈ ಕೆಳಗಿನವುಗಳಿಗೆ ಕಾರಣಗಳನ್ನು ಕೊಡಿ :**

1. ನೀರಿನಿಂದ ತುಂಬಿರುವ ಒಂದು ಜಾಡಿಯಲ್ಲಿ ಮುಳುಗಿದ ಒಂದು ಲೋಹದ ಪೆಟ್ಟಿಗೆ, ಸ್ವಲ್ಪ ನೀರನ್ನು ಹೊರದೂಡುತ್ತದೆ.

___________________________________

___________________________________

2. ಭೂಮಿಯ ಮೇಲಿನ ಎಲ್ಲಾ ಸ್ಥಳಗಳಲ್ಲಿ ಒಂದು ವಸ್ತುವಿನ ತೂಕ ಸಮವಾಗಿರುವುದಿಲ್ಲ.

___________________________________

___________________________________

3. ಒಂದು ಸ್ಟೀಲ್ ಚಮಚ ನೀರಿನಲ್ಲಿ ಮುಳುಗಿದರೆ, ಒಂದು ಪ್ಲಾಸ್ಟಿಕ್ ಚಮಚ ನೀರಿನ ಮೇಲೆ ತೇಲುತ್ತದೆ.

___________________________________

___________________________________

4. ನೀರಿನಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಮುಳುಗಿದ ಒಂದು ವಸ್ತು ತೋರಿಕೆಯ ತೂಕನಷ್ಟವನ್ನು ಅನುಭವಿಸುತ್ತದೆ.

___________________________________

___________________________________

5. ಯಾವುದೇ ಸನ್ನಿವೇಶದಲ್ಲಿ ಸಾಂದ್ರತೆಯು ಶೂನ್ಯ (ಸೊನ್ನೆ)ವಾಗಲು ಸಾಧ್ಯವಿಲ್ಲ.

___________________________________

___________________________________

©KTBS Not to be republished

**IV.** ಕಬ್ಬಿಣದ ಸಾಂದ್ರತೆಯು ನೀರಿನ ಸಾಂದ್ರತೆಗಿಂತ ಹೆಚ್ಚಾಗಿದ್ದರೂ ಸಹ **ಕಬ್ಬಿಣದಿಂದ ಮಾಡಲ್ಪಟ್ಟ ಒಂದು ಹಡಗು ನೀರಿನ ಮೇಲೆ ತೇಲುತ್ತಿರುವುದನ್ನು** ನೀವು ಈ ಚಿತ್ರದಲ್ಲಿ ಕಾಣಬಹುದು.



ಆರ್ಕಿಮಿಡೀಸ್ ತತ್ವದ ಸಹಾಯದಿಂದ ಇದನ್ನು ವಿವರಿಸಿ.

______________________________

______________________________

______________________________

**V.** **ಯೋಜನಾ ಕಾರ್ಯ :**

